The Hon'ble Sri H. C. DASAPPA (Minister for Finance and Industries).—Some of them are more or less formal.

Sri D. H. CHANDRASEKHARAIYA (Chitaldrug District—General).—The mover may take 10 minutes and other speakers may take 5 minutes each.

Mr. SPEAKER.—We have to cover as many as 10 demands to-day. If you want to reach all of them, it is better to allot only a small time for each cut motion.

The Hon'ble Sri H. C. DASAPPA.—Ten demands to be spread over 3½ hours *i.e.*, about 20 minutes per demand.

Mr. SPEAKER.—There are 18 cut motions out of which we may not be able to take up four within the time.

ಶ್ರೀ ಬಿ. ಚನ್ನಬ್ಯೆರೇಗೌಡರು (ಬೆಂಗಳೂರು ಜಿಲ್ಲೆ).—ಈ ಸಭೆಯ ಮುಂದಿನ ಕಾರ್ಯಕಲಾಪಗಳು ನಡೆಯುವುದಕ್ಕೆ ಮುಂಚೆ ಒಂದು ವಿಷಯವನ್ನು ಗಮನಕ್ಕೆ ತರಬೇಕೆಂದಿದ್ದೇನೆ. ಈ ದಿವಸ ಸಭೆ ಸೇರುವುದಕ್ಕೆ ಗೊತ್ತಾಗಿದ್ದ ಕಾಲವು ನಿನ್ನೆ ರಾತ್ರಿ ಸಭೆಯು ಮುಕ್ತಾಯವಾದಾಗ ಬದಲಾವಣೆಯಾಗಿದೆ. ಅದರಿಂದ ಪ್ರೇಕ್ಷಕರಾಗಿ ಗೊತ್ತಿಲ್ಲದೆ ಬಹಳ ತೊಂದರೆಯಾಯಿತು. ಇನ್ನು ಮುಂದೆ ಸಭೆಗೆ ಗೊತ್ತು ಮಾಡಿರುವ ಕಾಲವನ್ನು ವ್ಯತ್ಯಾಸ ಮಾಡಬೇಕಾದರೆ ಒಂದು ದಿವಸ ಮೊದಲೇ ಸಭೆಗೆ ತಿಳಿಸಬೇಕೆಂದು ವಿನಂತಿ.

Mr. SPEAKER.—How can I do it? It is for the House to decide.

ಶ್ರೀ ಬಿ. ಚನ್ನಬ್ಯೆರೇಗೌಡರು.—ಮೊದಲು ಒಂದು ಗಂಟೆಗೆ ಸಭೆ ಸೇರಬೇಕೆಂದು ಗೊತ್ತಾಗಿತ್ತು. ಆಮೇಲೆ ಬೆಳಿಗ್ಯೆ 8 ರಿಂದ 12ರವರೆಗೆ ಮಾಡಬೇಕೆಂದು ಬದಲಾವಣೆ ಮಾಡಿದರು. ಮತ್ತೆ ಪುನಃ ನಿನ್ನೆ ಬದಲಾವಣೆಯಾಗಿದೆ. ಇದರಿಂದ ಮುಂಚೆ ನಾವು ಗೊತ್ತು ಮಾಡಿಕೊಂಡಿದ್ದ ಕಾರ್ಯಕ್ರಮಗಳಿಗೆ ತೊಂದರೆ ಆಗಿದೆ. ಆದ್ದರಿಂದ ಕಾಲವನ್ನು ಬದಲಾವಣೆ ಮಾಡಬೇಕಾದರೆ ಒಂದು ದಿವಸ ಮೊದಲೇ ತಿಳಿಸಿದರೆ ಉತ್ತಮ ಎಂದು ಸೂಚಿಸುತ್ತೇನೆ. ಸಭೆಯಲ್ಲಿ ಮೆಜಾರಿಟಿ ಪಕ್ಷದ ಬೆಂಬಲವಿರುವುದರಿಂದ ಯಾವಾಗ ಬೇಕೋ ಆಗ ಬದಲಾಯಿಸಿದರೆ ತೊಂದರೆಯಾಗುತ್ತದೆ.

ಶ್ರೀ ಎಂ. ಎಕ್. ಜೋಯಿನರು (ಮೈಸೂರು ಜಿಲ್ಲೆ).—ಇದು ಮೆಜಾರಿಟಿ ಮತ್ತು ಮೈನಾರಿಟಿ ಪ್ರಶ್ನೆಯಲ್ಲ.

Mr. SPEAKER.—There is no need to discuss that point.

BUDGET FOR 1951-52

Voting of Demands for Grants for 1951-52—Second Stage.

Mr. SPEAKER (The Hon'ble Sri V. Venkatappa).—The Demands for Grants for 1951-52 may now be taken up.

DEMAND No. 1—Land Revenue.

The Hon'ble Sri H. SIDDAIYA (Minister for Revenue and Excise).—Sir, on the recommendation of His Highness the Maharaja, I beg to move:—

"That a sum not exceeding Rs. 25,21,000 be granted to the Government to defray the charges which will come in course of payment during the year ending 31st day of March 1952 in respect of 'Land Revenue'."

Mr. SPEAKER.—Motion moved:

"That a sum not exceeding Rs. 25,21,000 be granted to the Government to defray the charges which will coure in course of payment during the year ending 31st day of March 1952 in respect of 'Land Revenue'"

Sri S. KARIAPPA (Bangalore District-General).—Sir, cut motion No. 1 may probably have to be taken up under Demand No. 13.

Mr. SPEAKER.—That cut motion, I think, will have to be taken up under Demand No. 13. It comes under Land Revenue—District Administration. Cut motion No. 2 will also be taken up under Demand No. 13.

The next cut motion No. 8 stands in the name of Janab Syed Abdur Rahman. That will also be taken up under Demand No. 13. I shall read the numbers of selected cut motions:

1, 2, 8, 12, 24, 30, 32, 37, 54, 68, 70, 77, 80, 81, 91, 98, 103, 107, 113.

Out of these, Nos. 1, 2 and 8 have been disposed of.

Sri H. C. LINGA REDDY (Kolar District-General).—Cut motion No. 12 is in my name. If the Chair permits I will move it.

Mr. SPEAKER.—Cut motion No. 12 has been disallowed.

Janab SYED ABDUR RAHMAN (Chikmagalur *cum* Shimoga—Muslim).—I rise to a point of order. The arrangement was agreed to because we thought that the cut motion would be taken up in the order in which they are in the list. I now understand that the whole thing is changed.

ಶ್ರೀ ಬಿ. ಹುಚ್ಚೇಗೌಡರು (ಬೆಂಗಳೂರು ಜಿಲ್ಲೆ).—ನಾನು ಕಳುಹಿಸಿದ್ದ ಮೂರು ಖೋತಾ ನಿರ್ಣಯಗಳ ಪೈಕಿ ಒಂದೇ ಒಂದು ಬಂದಿದೆ.

ಅಧ್ಯಕ್ಷರು.—ನಿಮ್ಮ ಕಡೆಯವರು ಒಪ್ಪಿಕೊಂಡು ಒಂದು ಪಟ್ಟಿಕೊಟ್ಟಿದ್ದರು. ಅದರಂತೆ ಬಂದಿದೆ.

ಶ್ರೀ ಕೆ. ಪುಟ್ಟಸ್ವಾಮಿಯವರು (ಮೈಸೂರು ಜಿಲ್ಲೆ).- ನೆನ್ನೆ ದಿನ ಶ್ರೀ ವ ಹಂತದೇವರು ಮತ್ತು ಶ್ರೀ ಚೆನ್ನ ಬೈರೇಗೌಡರು ನಿಮ್ಮ ಪಾರ್ಟಿ ಪರವಾಗಿ ಇಷ್ಟು ಖೋತಾ ನಿರ್ಣಯಗಳನ್ನು ಮಂಡಿಸುತ್ತೇವೆ ಎಂದು ಹೇಳಿದ್ದರು. ಅದರಂತೆ ಒಂದು ಪಟ್ಟಿ ಕೊಟ್ಟರು.

Sri B. HUTCHE GOWDA.—You have got 180 cut motions but we have only six.

ಅಧ್ಯಕ್ಷರು.—ಅವರು ಹೇಳಿದ್ದನ್ನು ನೀವು ಒಪ್ಪದೇ ಇವ್ವರೆ ಏನೂ ಮಾಡುವುದಕ್ಕಾಗುವುದಿಲ್ಲ. ನಿಮ್ಮ 30ನೇ ನಂಬರಿನ ಖೋತಾ ನಿರ್ಣಯವನ್ನು ಮಂಡಿಸ ಬಹುದು.

Sri H. C. LINGA REDDY.—I may be given the option to move either cut motion No. 11 or 12. I will choose cut motion No. 11. If the Chair permits me I will move it.

Mr. SPEAKER.—That also will come under Demand No. 13.

Cut motion No. 24. Sri A. Bheemappa Naik. The Hon'ble Member is not present. Cut motion No. 30. Sri B. Hutche Gowda.

Delay and hardships to the raiyats in disposing of darkhast petitions.

Sri B. HUTCHE GOWDA (Tumkur District–General).—Sir, I beg to move:

"That the demand under the head '7. Land Revenue' for Rs 25,21,000 be reduced by Rs. 100 (to raise a debate on the delay and hardships to the raiyats in the matter of disposal of darkhast petitions)."

ಸ್ವತ್ತಿ, ಜಮೀನು ದರಖಾಸ್ತುಗಳು ಕಾಲಕಾಲಕ್ಕೆ ನರಿಯಾಗಿ ಜಾಗ್ರತೆ ವಿಲೇ ಆಗುತ್ತಾ ಇಲ್ಲ. ಇದು ಬಹಳ ಕಾಲದಿಂದ ಇರತಕ್ಕ ಒಂದು ಕೊರತೆ. ಅನೇಕ ವೇಳೆ ಈ ಸಭೆಯೊಳಗೂ ಮತ್ತು ಇನ್ನೂ ಅನೇಕ ಅರಿಕೆ ಗಳ ಮೂಲಕವೂ ಸರ್ಕಾರದವರ ಗಮನವನ್ನು ಈ ಕಡೆಗೆ ಸೆಳೆಯಲಾಗಿದೆ ಮತ್ತು ಅದರಲ್ಲೂ ಮುಖ್ಯವಾಗಿ ಹಿಂದುಳಿದಿರತಕ್ಕವರಿಗೆ ಜಮೀನಿಲ್ಲದಿರುವವರಿಗೆ ಜಮೀನು ಕೊಡಬೇಕೆಂದು ಕೇಳಿಕೊಳ್ಳುತ್ತಿದ್ದರೂ ಸರ್ಕಾರ ದಲ್ಲಿ ಪರಿಹಾರ ಕೊಡದೇ ಇರತಕ್ಕದ್ದು ಒಂದು ಪದ್ಧತಿ ಯಾಗಿದೆ. ಇವತ್ತಿನ ದಿನ ದರಖಾಸ್ತುದಾರರ ಸಾವಿ ರಾರು ಅರ್ಜಿಗಳು ವಿಲೇವಾರಿ ಆಗದೇ ಹಾಗೆಯೇ ಇವೆ. ಇವುಗಳು ಯಾವ ಕಾರಣದಿಂದ ವಿಲೇ ಆಗದೇ ಹಾಗೆಯೇ ಇವೆ ಎಂಬ ಬಗ್ಗೆ ಅನೇಕ ವೇಳೆ ಈ ಸಭೆಯಲ್ಲಿ ಒಂದು ಹೇಳಿಕೆ ಕೊಡಬೇಕೆಂದೂ ಕೂಡ ರೆವಿನ್ಯೂ ಸಚಿವರನ್ನು ಒತ್ತಾಯ ಮಾಡಿದ್ದಾರೆ. ಇದುವರೆಗೂ ಕೂಡ ಅದು ಕಾರ್ಯತಃ ಯಾವ ಸ್ಥಿತಿಯಲ್ಲಿದೆ ಎನ್ನುವುದು ನಮಗೆ ಗೊತ್ತಾಗಿಲ್ಲ. ಅದೂ ಅಲ್ಲದೆ ಅನೇಕ ವೇಳೆ ಸರ್ಕಾರ ದವರೂ ಸಹ ಆಗಾಗ್ಗೆ ತನಿಖೆ ಮಾಡಿ ವರದಿ ತರಿಸಬೇ ಕೆಂದು ಡೆಪ್ಯುಟಿ ಕಮೀಷನರಿಗೆ ತಿಳಿವಳಿಕೆ ಕೊಟ್ಟಿ ದ್ದಾರೆಂದು ಹೇಳಿದ್ದಾರೆ. ಆದರೂ ಕೂಡ ಕಾಲವಿ ಳಂಬ ಬಹಳ ಜಾಸ್ತಿಯಾಗುತ್ತಾ ಇದೆ. ಮುಖ್ಯವಾಗಿ ಹೆಚ್ಚು ಆಹಾರ ಬೆಳೆಯುವ ಯೋಜನೆ ಪ್ರಕಾರ ಅನೇಕ ಜಮೀನುಗಳು ವಿಲೇ ಆಗುತ್ತಿವೆ ಮತ್ತು ವಿಲೇ ಆಗುವು ದಕ್ಕೆ ಅನೇಕ ಅರ್ಜಿಗಳು ಬರುತ್ತಿವೆ. ಹಾಗಿದ್ದರೂ ಕೂಡ ಕಾರ್ಯತಃ ಜಮೀನು ಸರ್ಕಾರಕ್ಕೆ ಸಿಕ್ಕಿ ಅದರಲ್ಲಿ ಸಾಗುವಳಿ ಮಾಡಿ ಹೆಚ್ಚು ಬೆಳೆ ಬೆಳೆಯುವುದಕ್ಕೆ ಅವ ಕಾಶವಾಗಿಲ್ಲ. ಸಾಮಾನ್ಯವಾಗಿ ಬಡ ರೈತರು ಅರ್ಜಿ ಕೊಟ್ಟರೆ ಅದಕ್ಕೆ ಎಷ್ಟೋ ಕಾಲ ಕಾಯಬೇಕು. ಅರ್ಜಿ ಕೊಟ್ಟಮೇಲೆ ಕಚೇರಿಗಳಲ್ಲಿ ಎಷ್ಟು ತಾಪತ್ರಯ, ತೊಡಕುಗಳಿವೆ ಎಂಬುದನ್ನು ಅನೇಕ ವೇಳೆ ಈ ಸಭೆ ಯಲ್ಲಿ ವರ್ಣಿಸಿದ್ದಾರೆ.

ಆ ತಿಳಿವಳಿಕೆಯಿಲ್ಲದ ಬಡರೈತನಿಗೆ ಕಛೇರಿಗೆ ಹೋಗಿ ಯಾವ ಸರ್ವೆ ನಂಬರಿನಲ್ಲಿ ಎಷ್ಟು ಎಕರೆ ಜಮೀನು ಸರ್ಕಾರಿ ಪಡದಲ್ಲಿದೆಯೆಂದು ತಿಳಿದುಕೊಂಡು ಅರ್ಜಿ ಹಾಕುವುದು ಕಷ್ಟ. ಒಂದುವೇಳೆ ಹೇಗಾದರೂ ಮಾಡಿ ಕೊಂಡು ಅರ್ಜಿ ಸಲ್ಲಿಸಿದರೂ ಅದು ಯಾವ ಗೊಟ್ಟಕ್ಕೆ ಹೋಗುತ್ತದೆಯೋ ಗೊತ್ತಿಲ್ಲ. ಆದ್ದರಿಂದ ಸ್ಥಳದಲ್ಲೇ ಪ್ರತಿಯೊಂದು ಊರಿಗೂ ಒಂದು A and B list ತಯಾರುಮಾಡಿಸಿ, ಯಾವ್ಯಾವ ಜಮೀನು ವಿಲೇವಾರಿ ಲಿಸ್ಟಿನಲ್ಲಿ ಸೇರುತ್ತೆ, ಯಾವ್ಯಾವು ವಿಲೇವಾರಿಗೆ ಬರುವು ದಿಲ್ಲವೆಂದು ಎಲ್ಲರಿಗೂ ತಿಳಿಯುವಂತೆ ಪ್ರಕಟಿಸಬೇಕೆಂದು ಎಷ್ಟೋಸಾರಿ ನಾವು ಹೇಳಿದ್ದೇವೆ. ಆದರೆ ಇದುವ ರೆಗೂ ಕಾರ್ಯತಃ ಏನೂ ನಡೆಯುತ್ತಿಲ್ಲ. ಪ್ರತಿಯೊಂ ದಕ್ಕೂ ಶ್ಯಾನುಭೋಗ ಪಟೇಲರನ್ನೂ ಕಚೇರಿ ಗುಮಾ ಸ್ತರನ್ನೂ ಅನುಸರಿಸಿಕೊಂಡು ಹೋಗಿ ಅಮಲ್ದಾರರನ್ನು ಸ್ಥಳಕ್ಕೆ ಕರೆದುಕೊಂಡು ಹೋಗಿ ಅವರನ್ನೊಪ್ಪಿಸಿ ಜಮೀನು ಪಡೆಯಬೇಕೆಂದರೆ ಅಷ್ಟು ತಿಳಿವಳಿಕೆಯಾ ದರೂ ಅವನಿಗಿದೆಯೇ? ಎಷ್ಟು ದುಡ್ಡು ಖರ್ಚು ಮಾಡ ಬೇಕಾಗುತ್ತದೆ. ಹೀಗಾಗಿ ರೈತರು ಅನೇಕ ರೀತಿ ಯಲ್ಲಿ ಲಂಚ ರುಷವತ್ತುಗಳನ್ನು ಕೊಡಬೇಕಾಗಿ ಬರು ತ್ತದೆ. ಕೊಟ್ಟರೂ ಕೂಡ ತಮ್ಮ ಕೆಲಸ ನಡೆಯುತ್ತ ದೆಂಬ ಭರವಸೆ ಅವರಿಗಿಲ್ಲ. ಏಕೆಂದರೆ ಕೆಳಗಿನಿಂದ ಮೇಲಿನವರೆಗೂ ಪ್ರತಿಯೊಂದು ಕೈಯನ್ನೂ ಬೆಚ್ಚಗೆ ಮಾಡಬೇಕಾಗಿರುತ್ತದೆ. ಅನೇಕ ವರ್ಷಗಳಿಂದ ಬಾಕಿ ಯಿರುವ ಕೇಸುಗಳು ಈಗಲೂ ಅನೇಕವಾಗಿವೆ. ಮಂತ್ರಿ ಗಳವರೆಗೂ ಅವುಗಳ ವಿಷಯದಲ್ಲಿ ಅಪೀಲು ಕೇಸುಗಳು ಬರುತ್ತಿರುವುದು ತಮಗೇ ಗೊತ್ತಿದೆ. ಇಷ್ಟೆಲ್ಲಾ ತಮ್ಮಲ್ಲಿಗೆ ಅಪೀಲಿಗೆ ಬರಬೇಕಾದರೆ ರಾಯರುಗಳಿಗೆ ಎಷ್ಟು ದುಡ್ಡು ಖರ್ಚಾಗಿರುತ್ತದೆ, ಆ ಜಮೀನಿನ ಬೆರೆ ಯೇನು ಎಂಬುದನ್ನು ನೋಡಿಕೊಂಡರೆ, ಆ ದುಡ್ಡಿಗೆ ಅವರು ಬೇರೆ ಎಲ್ಲಾದರೂ ಹೊನದಾಗಿ ಜಮೀನನ್ನೇ ಕೊಂಡುಕೊಳ್ಳಬಹುದಾಗಿತ್ತು. ಸರ್ಕಾರದವರೇ ನೋಡಿ ಜಮೀನಿಲ್ಲದವರಿಗೆಲ್ಲಾ ಜಮೀನು ಕೊಡುತ್ತಾರೆಂದು ಅತ ಬಂದು ಹೀಗೆಲ್ಲಾ ಸಿಕ್ಕುಹಾಕಿಕೊಳ್ಳುತ್ತಾನೆ. ಅವನು ಕಷ್ಟಪಟ್ಟು ಜಮೀನು ಪಡೆದುಕೊಳ್ಳುವ ಹೊತ್ತಿಗೆ ಅತನಿಗಿದ್ದ ಅಲ್ಪಸ್ವಲ್ಪ ಜಮೀನನ್ನೂ ಕಳೆದುಕೊಳ್ಳುವು ದಕ್ಕೆ ಮಾರ್ಗವಾಗಿರುತ್ತದೆ. ಹೆಜ್ಜೆಹೆಜ್ಜೆಗೂ ಅತನಿಗೆ ಖರ್ಚಾಗುತ್ತಿರುತ್ತದೆ. ಆದ್ದರಿಂದ ಆ ರೈತರುಗಳಿಗೆ ನರಿಯಾಗಿ ತಿಳಿವಳಿಕೆ ಕೊಟ್ಟು ಯಾವ ಜಮೀನು ಸಿಕ್ಕುವ ಹಾಗಿದೆ, ಯಾವ ಜಮೀನು ಸಿಕ್ಕುವುದಿಲ್ಲ ಎಂಬ ವಿಚಾರ ದಲ್ಲಿ ನರಿಯಾದ ಮಾಹಿತಿಯನ್ನು ಕೊಡುವುದಕ್ಕೆ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅದನ್ನು ಕೈಕೊಳ್ಳ ಬೇಕೆಂದು ಹೇಳುತ್ತೇನೆ.

ಈ ಸಂದರ್ಭದಲ್ಲಿ ಸೇಂದಿ ವನಗಳ ವಿಲೇವಾರಿ ವಿಷಯ ಸ್ವಲ್ಪ ಹೇಳಬೇಕಾಗಿದೆ. ಸಂಸ್ಥಾನದ ಶೇಂದಿ ವನಗಳು ಅನೇಕವು ಈಗಾಗಲೇ ಎಕ್ಸ್ಪೈಸ್ ಬಾಬಿನಿಂದ release ಆಗಿವೆ. ಆದರೂ ಅವುಗಳಲ್ಲಿ ಇನ್ನೂ ಕೆಲವು ಗಿಡಗಳಿದ್ದು ಶೇಂದಿ ವನಗಳೆಂದು ಹೆಸರಾಗಿಯೇ ನಿಂತಿವೆ. ನಮ್ಮ ಡಿಸ್ಟ್ರಿಕ್ಟಿನಲ್ಲಿ ಪಾನನಿರೋಧ ಪೂರ್ತಿ

ಯಾಗಿ ಜಾರಿಗೆ ಬಂದು ಎಷ್ಟೋ ದಿವಸಗಳಾದರೂ ಇನ್ನೂ ಆ ಶೇಂದಿ ವನಗಳನ್ನು ವಿಲೇವಾರಿಗೆ ಕೊಡದೆ ಹಾಗೆಯೇ ಇಟ್ಟುಕೊಂಡಿದ್ದೀರಿ. ಇದೊಂದು ಬೇರೆ ರೈತರಿಗೆ ತೊಂದರೆಯಾಗಿದೆ. ಅನೇಕ ಫಲವತ್ತಾದ ಜಮೀನುಗಳು ಊರಿನ ಪಕ್ಕದಲ್ಲೇ ಇದ್ದು ಅವುಗಳನ್ನು ಗ್ರಾಮಾಂವೇಶನ ವಿಸ್ತೀರ್ಣಕ್ಕಾಗಿ ಮತ್ತು ಇನ್ನೂ ಅನೇಕ ಸರ್ಕಾರಿ ಕೆಲಸಗಳಿಗಾಗಿ ತೆಗೆದು ಕೊಂಡುಬಿಟ್ಟಿರುತ್ತಾರೆ. ಅವಕ್ಕೆ ಬದಲು ಬೇರೆ ಉತ್ತಮವಾದ ಜಮೀನುಗಳನ್ನು ಅವರಿಗೆ ಕೊಡುವುದು ಅವಶ್ಯಕವಾಗಿದೆ. ಆದ್ದರಿಂದ ಹೊಸದಾಗಿ ಈ ಶೇಂದಿ ವನಗಳನ್ನು release ಮಾಡಿ ಬೇಗ ಕೊಡದೆಹೋದರೆ ಆಹಾರ ಹೆಚ್ಚಿಗೆ ಬೆಳೆಯುವುದಕ್ಕೆ ಅವಕಾಶವಾಗುವುದಿಲ್ಲ. ಶೇಂದಿ ವನಗಳನ್ನು ಹಿಂದೆ ಇದ್ದಂತೆ ರಿಸರ್ವ್ ಮಾಡಬೇಕಾದ ಕಾರಣವಿಲ್ಲ . . . . . .

ಅಧ್ಯಕ್ಷರು.—ಈ ಖೋತಾ ಸೂಚನೆಯಲ್ಲಿರುವುದು "Delay in the matter of disposal of Darkhast Petitions" ಎಂದು. ತಾವೇನಿದ್ದರೂ ಹೇಗೆ ನಿಧಾನವಾಗುತ್ತಿದೆಯೆಂಬುದನ್ನು ಮಾತ್ರ ಹೇಳಬೇಕೇ ಹೊರತು ಶೇಂದಿ ರಿಸರ್ವ್‌ಗಳನ್ನು ಬಿಡಿಸಿಕೊಡುವ ವಿಚಾರವನ್ನೆಲ್ಲಾ ಹೇಳುವುದಕ್ಕೆ ಅವಕಾಶವಿಲ್ಲ.

ಶ್ರೀ ಬಿ. ಹುಚ್ಚೇಗೌಡರು.—ಅದಕ್ಕೂ ದರಖಾಸ್ತು ಹಾಕಬೇಕಾಗಿದೆ.

ಅಧ್ಯಕ್ಷರು.—ಇರಬಹುದು. ದರಖಾಸ್ತು ವಿಲೇವಾರಿಯಾಗುವುದರಲ್ಲಿ ತಡವಾಗದಿರುವುದಕ್ಕೆ ಏನು ಮಾಡಬೇಕೆಂಬುದನ್ನು ಮಾತ್ರ ತಾವು ಹೇಳಬೇಕು.

ಶ್ರೀ ಬಿ. ಹುಚ್ಚೇಗೌಡರು.—ಸರ್ಕಾರದವರ ಗಮನಕ್ಕೆ ಒತ್ತಾಯವಾಗಿ ಈ ವಿಷಯವನ್ನು ತರುವುದಕ್ಕಾಗಿ ಖೋತಾ ನಿರ್ಣಯವನ್ನು ಸಭೆಯ ಮುಂದಿಟ್ಟಿರುತ್ತೇನೆ.

Mr. SPEAKER.—Cut motion moved:

"That the demand be reduced by Re. 1."

*ಶ್ರೀ ಎಂ. ವಿ. ಕೃಷ್ಣಪ್ಪನವರು (ಕೋಲಾರ ಜಿಲ್ಲೆ).—ಸ್ವಾಮೀ, ಶ್ರೀಮಾನ್ ಬಿ. ಹುಚ್ಚೇಗೌಡರು ತಂದಿರುವ ನಿರ್ಣಯವನ್ನು ವಿರೋಧಿಸುತ್ತಾ ನಾಲ್ಕು ಮಾತುಗಳನ್ನು ಹೇಳುತ್ತೇನೆ. ದರಖಾಸ್ತು ಅರ್ಜಿಗಳು ತಡವಾಗುತ್ತಿವೆಯೆಂದು ಹೇಳಿ ಈ ಖೋತಾ ನಿರ್ಣಯವನ್ನು ತಂದಿರುವುದಾಗಿ ಅವರು ಹೇಳಿದರು. ಈಗಿರುವ ಪದ್ಧತಿಯ ಪ್ರಕಾರ ಜಮೀನನ್ನು ಸಾಗಿಗೆ ಪಡೆಯಬೇಕಾದರೆ ಸಾಮಾನ್ಯವಾಗಿ ಮೊದಲು ರೈತರು ಅಮಲ್ದಾರರಿಗೆ ಅರ್ಜಿ ಕೊಡುತ್ತಾರೆ. ಅಮಲ್ದಾರರು ಸಂಬಂಧಪಟ್ಟ ಶೇಕ್‌ದಾರರಿಗೆ ಈ ಅರ್ಜಿ ಕಳುಹಿಸಿಕೊಡುತ್ತಾರೆ. ಶೇಕ್‌ದಾರರು ಸ್ಥಳಕ್ಕೆ ಹೋಗಿ ಸ್ಥಳದ ವಿದ್ಯಮಾನಗಳನ್ನು ತಿಳಿದುಕೊಂಡು ಮಹಜರ್ ಮಾಡಿ ಅಮಲ್ದಾರರಿಗೆ ವಾಪಸು ಕಳುಹಿಸಿಕೊಡುತ್ತಾರೆ. ಈ ರೀತಿಯಾಗಿ ಅನೇಕ formalities ನಡೆಯಬೇಕಾಗಿದೆ. ಹಂಗಾಮಿ ಸಾಗುವಳಿಗಾದರೆ grow more food ಯೋಜನೆ ಗನುಸಾರವಾಗಿ ಅಮಲ್ದಾರರೇ ತಕ್ಷಣ ಯಾವ ಜಮೀನನ್ನಾದರೂ ಕೊಡಬಹುದು. ಆದರೆ ಇದು ಖಾಯಮ್ಮಾಗಿ ರೈತನಿಗೆ ಕೊಡತಕ್ಕಂಥಾದ್ದು. ಸ್ವಲ್ಪ ಜಮೀನಾದರೆ ಸಬ್ ಡಿವಿಜನ್ ಆಫೀಸರಿಗೆ ಹೋಗಬೇಕು. ಹೆಚ್ಚಿಗೆ ಜಮೀನಾದರೆ ಡೆಪ್ಯುಟಿ ಕಮೀಷನರವರೆಗೂ ಹೋಗಬೇಕಾಗುತ್ತದೆ. ಇದೇ ವಿಷಯದಲ್ಲಿ ಮಾತನಾಡುತ್ತಾ ಮಾನ್ಯ ಹುಚ್ಚೇಗೌಡರು ಹಿಂದೆ ಇದೇ ಸಭೆಯಲ್ಲಿ ಅನೇಕಸಾರಿ ಹೇಳಿದ್ದಾರೆ, 'ಜಮೀನು ಹಂಚಿಕೆಯ ವಿಷಯದಲ್ಲಿ ಮಂತ್ರಿಗಳೇ ನೇರವಾಗಿ ಅನೇಕ ಸಂದರ್ಭಗಳಲ್ಲಿ ಕೊಟ್ಟಿರುತ್ತಾರೆ. ನ್ಯಾಯವಾಗಿ ಅನುಸರಿಸಬೇಕಾದ ಯಾವ procedure ನ್ನೂ ನೋಡದೆ ಸಂಬಂಧಪಟ್ಟ ಶ್ಯಾನುಭೋಗರು ಪಟೇಲರು ಶೇಕ್‌ದಾರರಾದಿಯಾಗಿ ಯಾವ ಅಧಿಕಾರಿಗಳ ಅಭಿಪ್ರಾಯವನ್ನೂ ಕೇಳದೆ ಜಮೀನುಗಳನ್ನು ವಿಲೇವೇ ಮಾಡುತ್ತಿರುವುದರಿಂದ ಆ ಅಧಿಕಾರಿಗಳ ಮನಸ್ಸು ಕೆಟ್ಟು ಸರ್ಕಾರದಲ್ಲಿ ಅಡಳಿತ ಸಡಿಲತೆಯುಂಟಾಗುವುದಕ್ಕೆ ಕಾರಣವಾಗಿದೆ' ಎಂದು. ಆ ದೃಷ್ಟಿಯಿಂದಲೇ ಈಗ ಅಮಲ್ದಾರರುಗಳು ಕ್ರಮವಾಗಿ ಎಲ್ಲಾ procedure ರೀತ್ಯಾ ಹೋಗಬೇಕೆಂದಿರುವುದು ಅಗತ್ಯ. ಅದರಲ್ಲೂ ಈಗ ಎಲ್ಲಾ ಕಡೆಗಳಲ್ಲೂ ಜನ ಜಮೀನು ಬೇಕೆಂದು ಕೇಳುತ್ತಿದ್ದಾರೆ. ಇನ್ನೊಂದು ಆಕ್ಷೇಪಣೆ ಬೇರೆ ಇದೆ ಊರಿನವರಿರುವ ಜಮೀನನ್ನೆಲ್ಲಾ ಕೊಟ್ಟುಬಿಟ್ಟಿದ್ದಾರೆ, ಸಾಕಾದಷ್ಟು ಗೋಮಾಳವನ್ನು ಕೂಡ ಬಿಟ್ಟಿಲ್ಲ, ಎಂದು ಅನೇಕರು ಹೇಳುತ್ತಿದ್ದಾರೆ. ಈ ಕಾರಣದಿಂದಲೂ ಜಮೀನುಗಳನ್ನು ಈ ರೀತಿ ಹಂಚತಕ್ಕ ವಿಧಾನ ಬಿಗಿಯಾಗಿರಬೇಕಾದ ಅವಶ್ಯಕತೆಯಿದೆ. ಏಕೆಂದರೆ ಎಷ್ಟು ಸುಲಭವಾಗಿ ಜಮೀನು ಕೊಡುವ ರೀತಿ ಮಾಡಿಕೊಟ್ಟರೆ ಅಷ್ಟೂ ಸುಲಭವಾಗಿ ಹಂಚಿಕೊಂಡು ಬಿಡುತ್ತಾರೆ. ಭೂಮಿಯೆಂದರೆ ಎಲ್ಲರಿಗೂ ಆಸೆ ಇದ್ದೇ ಇರುತ್ತದೆ. ಭೂಮಿಗಾಗಿಯೇ ಯುದ್ಧಗಳಾಗುವುದು. ಆದ್ದರಿಂದ ಈಗ ನಿಯಮಗಳು ಇಷ್ಟಾದರೂ ಬಿಗಿಯಾಗಿರುವುದರಿಂದ ಈಗಲೂ ಅಲ್ಪಸ್ವಲ್ಪ ಜಮೀನುಗಳು ಉಳಿದಿವೆ. ನಮ್ಮ ಕಡೆಯಲ್ಲಿ ಬೆಟ್ಟದ ಮೇಲೆ ಅರ್ಧ ಎಕರೆ ಜಮೀನಿತ್ತು. ಅದಕ್ಕೂ ಕೂಡ ದರಖಾಸ್ತು ಹಾಕಿದ್ದರು. ಹೀಗೆ ಒಂದೊಂದು ಅಂಗುಲ ಭೂಮಿಯನ್ನೂ ಕೂಡ ವ್ಯವಸಾಯ ಮಾಡುತ್ತೇವೆಂದು ಜನ ಕೇಳುತ್ತಿದ್ದಾರೆ. ಆದ್ದರಿಂದ ಹೀಗೆ ಜಮೀನು ವಿಲೇವಾರಿ ಮಾಡುವುದರಲ್ಲಿ ಸ್ವಲ್ಪಮಟ್ಟಿಗೆ ಯೋಚನೆಮಾಡಿ ಕೊಡುವುದು ಅಗತ್ಯ. ಇದೇ ವಿಷಯದಲ್ಲಿ 26ನೆಯ ನಂಬರಿನ ಖೋತಾ ನಿರ್ಣಯವೂ ಬಂದಿದೆ. ಅದರಲ್ಲಿ unauthorised cultivation ನ್ನನ್ನು ಅದಷ್ಟುಮಟ್ಟಿಗೆ ನಿಲ್ಲಿಸುವುದಕ್ಕೆ ಪ್ರಯತ್ನಮಾಡಬೇಕೆಂದು ಮಾನ್ಯ ಸದಸ್ಯರೊಬ್ಬರು ಸೂಚನೆ ಕೊಟ್ಟಿದ್ದಾರೆ. ಸರ್ಕಾರದವರು 'grow more food' 'grow more food' ಎಂದು ಹೇಳುತ್ತಿರುವುದನ್ನು ಕೇಳಿಕೊಂಡು ರೈತರಿಗೆ ಒಂದು ತೆರದಲ್ಲಿ ಧೈರ್ಯ ಬಂದುಬಿಟ್ಟಿದೆ. ದರಖಾಸ್ತು ಕೊಡಲಿ, ಕೊಡದೆ ಇರಲಿ ಎಲ್ಲಿ ಯಾವ ಜಮೀನು ಕಾಣಲಿ ಮಳೆ ಬಂತು ಎಂದ ತಕ್ಷಣ ಯಾರನ್ನೂ ಹೇಳದೇ ಕೇಳದೆ ಉತ್ತು ಬಿತ್ತಿ ಬೆಳೆ ಮಾಡಿಕೊಂಡು ಬಿಡಬಹುದೆಂದು ಅವರು ಭಾವಿಸಿರುವಂತೆ ಕಾಣುತ್ತೆ. ದವಸ ಎಲ್ಲಾ ಬೆಳೆದುಕೊಂಡ ಮೇಲೆ ದರಖಾಸ್ತು ಕೊಡುವ ಪದ್ಧತಿಯಿರುವಂತೆ ಕಾಣುತ್ತೆ. ಶ್ಯಾನುಭೋಗರೇ ದರಖಾಸ್ತಿಲ್ಲವೆ ಕೊಟ್ಟಿರುವುದೂ . . . . . .

ಅಧ್ಯಕ್ಷರು.—Delay ಆಗುವುದಕ್ಕೆ ಅವಕಾಶವಿರಬಾರದು ಅದನ್ನು ತಪ್ಪಿಸಬೇಕು ಎಂದು ಈ cut motion ನಲ್ಲಿ ಹೇಳಿದೆ. ಅದರ ವಿಚಾರ ಹೇಳಿ.

ಶ್ರೀ ಎಂ. ವಿ. ಕೃಷ್ಣಪ್ಪನವರು.—ಈ ಎಲ್ಲಾ ಕಾರಣಗಳಿಂದ speedy ಆಗಿ ಈ ದರಖಾಸ್ತು ಅರ್ಜಿಗಳನ್ನು ವಿಲೇ ಮಾಡುವುದು ತಪ್ಪು; ಬಹಳಬೇಗ ಮಾಡುವುದರಿಂದ ರೈತರಿಗೇನೋ ಉಪಕಾರವಾಗಬಹುದು. ಆದರೆ ಹಾಗೆ ಮಾಡುವುದರಿಂದ ದುರುಪಯೋಗವಾಗುವ ಸಂದರ್ಭಗಳೂ ಇರುತ್ತವೆ. ಇದನ್ನು ತಪ್ಪಿಸುವುದಕ್ಕೆ ಶ್ರೀಮಾನ್ ಹುಚ್ಚೇಗೌಡರೂ ಕೂಡ ಏನೂ ಉಪಾಯ ಹೇಳಲಿಲ್ಲ. ಆದ್ದರಿಂದ ಏನಿದ್ದರೂ ನ್ಯಾಯವಾಗಿರುವುಗಳ ವಿಚಾರದಲ್ಲಿ ಹೆಚ್ಚಿಗೆ ಸಾವಕಾಶವಾಗದಂತೆ

(ಶ್ರೀ ಎಂ. ವಿ. ಕೃಷ್ಣಪ್ಪನವರು.)

ಮಾಡಿದರೆ ಸಾಕಾಗಿವೆಯೆಂದು ಹೇಳಿ ಈ ಖೋತಾ ಸೂಚನೆಯನ್ನು ನಾನು ವಿರೋಧಿಸುತ್ತೇನೆ.

ಶ್ರೀ ಎಂ. ಎಕ್. ಮಹಾಂತದೇವರು (ಮೈಸೂರು ಜಿಲ್ಲೆ).—ಮಾನ್ಯ ಅಧ್ಯಕ್ಷರೇ, ನನ್ನ ವಿತ್ರರು ತಂದಿರತಕ್ಕ ಖೋತಾ ನಿರ್ಣಯವನ್ನು ಪುಷ್ಟೀಕರಿಸುತ್ತಾ ಕೆಲವು ವಿಷಯಗಳನ್ನು ನಭೆಯ ಗಮನಕ್ಕೆ ತರುತ್ತೇನೆ. ಈಗ ಸಾಮಾನ್ಯವಾಗಿ ಸಿವಿಲ್ ಕೋರ್ಟುಗಳಲ್ಲಿ ಯಾವುದಾದರೂ ಒಂದು ವ್ಯಾಜ್ಯ ಒಂದರೆ ಅದನ್ನು ಇಷ್ಟು ಕಾಲದೊಳಗೆ ತೀರ್ಮಾನ ಮಾಡಬೇಕೆಂದು ಒಂದು ಕಾಲ ನಿಯಮವನ್ನಿಟ್ಟಿದ್ದಾರೆ. ಅದೇ ರೀತಿಯಲ್ಲಿ ಸರ್ಕಾರದವರೂ ಕೂಡ ದರಖಾಸ್ತು ಅರ್ಜಿಗಳು ಬಂದರೆ 6 ತಿಂಗಳೊಳ್ಗೋ, ಅಥವಾ ಒಂದು ವರ್ಷದೊಳ್ಗೋ ತೀರ್ಮಾನ ಮಾಡಬೇಕೆಂದು ಒಂದು ಕಾಲ ನಿಗದಿ ಮಾಡುವುದು ಒಳ್ಳೆಯದು. ಅಮಲ್ದಾರರು ಮತ್ತು ವಗ್ಗೈರೆ ಅಧಿಕಾರಿಗಳು ಅದಷ್ಟು ಜಾಗ್ರತೆ ಮಾಡುವಂತೆ ಮಾಡಬೇಕು.

Sri K. PUTTASWAMY (Mandya District—General).—What about the stay orders that you take as lawyers?

ಶ್ರೀ ಎಂ. ಎಕ್. ಮಹಾಂತದೇವರು.—ಲಾಯರುಗಳು ಅಡ್ಡ ಬಂದು stay order ಗಳನ್ನು ತಂದಿದ್ದರೆ ಅದು ಬೇರೆ ವಿಷಯ. ಹಾಗಿಲ್ಲದೆ ಸಾಮಾನ್ಯ ದರಖಾಸ್ತು ಅರ್ಜಿಗಳ ವಿಷಯದಲ್ಲಿ ಅವುಗಳನ್ನು ಕೊಟ್ಟ ತಕ್ಷಣ ಕೂಡಲೆ ಪರಿಶೀಲನೆ ನಡೆಸಿ ತೀರ್ಮಾನ ಮಾಡುವುದಕ್ಕೆ ಒಂದು ಕಾಲದ ನಿಬಂಧನೆ ಮಾಡುವುದು ಅತ್ಯಾವಶ್ಯಕ. ಸಿವಿಲ್ ಕೋರ್ಟುಗಳಲ್ಲೂ ಸಹ ಯಾವುದಾದರೂ temporary injunction ಅಥವಾ temporary order ಗಳಿದ್ದರೆ ಅವೂ ಅಪೀಲಿನಲ್ಲಿ ಬರುತ್ತವೆ. ಅವೂ ಕೂಡ ಕೂಡಲೇ ತೀರ್ಮಾನವಾಗುತ್ತವೆ. ಅದೇ ರೀತಿಯಾಗಿ ರೆವಿನ್ಯೂ ಅಪೀಲ್ ಕೋರ್ಟುಗಳಲ್ಲೂ ಕೂಡ ಅದಷ್ಟು ಶೀಘ್ರವಾಗಿ ದರಖಾಸ್ತು ವಿಷಯದಲ್ಲಿ ಬೇಗ ಇತ್ಯರ್ಥ ಮಾಡಬೇಕೆಂದಾದರೂ ಹೇಳುವುದು ಅತ್ಯಾವಶ್ಯಕವಾಗಿದೆ.

ಏಕೆಂದರೆ, ದರಖಾಸ್ತು ಅರ್ಜಿ ಹಾಕಿಕೊಳ್ಳುವವರಲ್ಲಿ ಜಮೀನಿಲ್ಲದೇಯಿರುವವರೂ ಇರುತ್ತಾರೆ, ಸ್ವಲ್ಪ ಜಮೀನಿದ್ದು ಇನ್ನೂ ಹೆಚ್ಚು ಜಮೀನು ಮಾಡಬೇಕೆಂಬ ಆಶೆಯಿರುವವರೂ, ಜಮೀನಿನಲ್ಲಿ ಪ್ರೇಮವಿರುವವರೂ ಇರುತ್ತಾರೆ. ಜಮೀನಿನಲ್ಲ ಇಷ್ಟವಿಲ್ಲದೇಯಿರುವವರು ಜಮೀನಿಗೆ ದರಖಾಸ್ತು ಹಾಕಲು ಬರುವುದಿಲ್ಲ. ಆದುದರಿಂದ ಈ ವಿಷಯದಲ್ಲಿ ತಕ್ಕ ವಿಪರ್ಾಡು ಮಾಡುವುದರಿಂದ ಸರ್ಕಾರದವರು ಕೈಕೊಂಡಿರುವ ಹೆಚ್ಚು ಬೆಳೆ ಬೆಳೆಯುವ ಯೋಜನೆಗೂ ಬಹಳ ಸಹಾಯವಾಗುತ್ತದೆ. ಕೆಲವು ಸಂದರ್ಭಗಳಲ್ಲಿ ಅಪ್ಪಿತಪ್ಪಿ ದರಖಾಸ್ತು ಬೇಗ ಮಂಜೂರಾದರೂ ವಾಸ್ತವವಾಗಿ ಜಮೀನು ಸ್ವಾಧೀನ ಕೊಡುವಾಗ ತೊಂದರೆ ಕೊಡುತ್ತಿದ್ದಾರೆ. ಆದುದರಿಂದ ದರಖಾಸ್ತಾದ ಜಮೀನನ್ನು ಮೊದಲೇ ಸರಿಯಾಗಿ ಅಳತೆಮಾಡಿ ದರಖಾಸ್ತು ಮೂಲಕ ಯಾರು ಪಡೆಯುತ್ತಾರೋ ಅವರಿಗೆ ಕೊಡುವಂತೆ ಸರಿಯಾದ ತಿಳಿವಳಿಕೆ ಕೊಡುವುದು ಅತ್ಯಾವಶ್ಯಕ. ಏಕೆಂದರೆ ಅನೇಕ ಸಂದರ್ಭಗಳಲ್ಲಿ ದರಖಾಸ್ತುದಾರರಿಗೆ ಸಾಗುವಳಿ ಚೀಟಿ ಬಂದಿದೆ; ಆದರೆ ಜಮೀನು ಸ್ವಾಧೀನ ಮಾತ್ರ ಆಗಿಲ್ಲ. ಇದಕ್ಕೆ ಕಾರಣ ಬೌಂಡರಿ ಗೊತ್ತು ಮಾಡಿ ಕೊಡುವುದನ್ನು ಕೈಬಿಡುತ್ತಾರೆ. ಆಗ ಪಕ್ಕದ ಜಮೀನಿನವನಿಗೂ ದರಖಾಸ್ತುದಾರನಿಗೂ ಜಗಳವಾಗಿ ಕೋರ್ಟುಗಳಿಗೆ ಹೋಗಿ ಕಷ್ಟಪಡುತ್ತಾರೆ. ಆದುದರಿಂದ ಅದಷ್ಟು ಜಾಗ್ರತೆ ತೀರ್ಮಾನವಾಗುವಂತೆ ಮಾಡಬೇಕು; ಜಮೀನು ಕೊಟ್ಟರೆ ನರಿಯಾಗಿ ಬೌಂಡರಿಕಲ್ಲು ಹಾಕ ತಕ್ಷಣ ವ್ಯವಸಾಯ ಮಾಡಲು ಅವಕಾಶಕಲ್ಪಿಸಿ ಕೊಡಬೇಕೆಂದು ಹೇಳಿ ಮುಗಿಸುತ್ತೇನೆ.

ಶ್ರೀ ಡಬ್ಲ್ಯು. ಎಚ್. ಹನುಮಂತಪ್ಪನವರು (ಬೆಂಗಳೂರು ಜಿಲ್ಲೆ).—ಅಧ್ಯಕ್ಷರೇ, ದರಖಾಸ್ತು ಯಾವ ರೀತಿ ಬೇಗ ಫೈನಲು ಆಗಬೇಕೆಂಬುದನ್ನು ಶ್ರೀಮಾನ್ ಹುಚ್ಚೇಗೌಡರು ಒತ್ತಾಯ ಮಾಡಿ ಹೇಳಿದರು. ಈ ವಿಷಯದಲ್ಲಿ ನಾನೊಂದು ಸಲಹೆ ಕೂಡ ಕೊಡುತ್ತೇನೆ. ಪ್ರತಿ ತಾಲ್ಲೂಕಿನಲ್ಲಿಯೂ ಒಂದು ರಿಜಿಸ್ಟರನ್ನು ಇಟ್ಟುಕೊಂಡು ಅದರಲ್ಲಿ ಎಷ್ಟೆಷ್ಟು ದರಖಾಸ್ತು ಅರ್ಜಿಗಳು ಬರುತ್ತವೋ ಅವೆಲ್ಲವನ್ನೂ ಬರೆದುಕೊಳ್ಳಬೇಕು. ಆ ಅರ್ಜಿಗಳನ್ನು ರೆವಿನ್ಯೂ ಇನ್‌ಸ್ಪೆಕ್ಟರುಗಳಿಗೆ ಕಳುಹಿಸುವಾಗ ಇಷ್ಟು ದಿವಸದಲ್ಲಿ ಫೈನಲಾಗಬೇಕೆಂದು ತಿಳಿಸಿ ಆ ರಿಜಿಸ್ಟರಿನಲ್ಲಿ ಬರೆದು ಕೊಳ್ಳಬೇಕು. ಇಂತಹ ರಿಜಿಸ್ಟರಿದ್ದರೆ ಮೇಲ್ಪಟ್ಟ ಅಧಿಕಾರಿಗಳು ದರಖಾಸ್ತು ಫೈನಲಾಗುವುದು ತಡವಾದರೆ ಏಕೆ ತಡವಾಯಿತೆಂದು ಕೇಳುವುದಕ್ಕೆ ಅನುಕೂಲವಾಗುತ್ತವೆ. ಆದುದರಿಂದ ಇಂತಹ ರಿಜಿಸ್ಟರುಗಳನ್ನಿಡುವ ವಿಪರ್ಾಡು ಮಾಡಬೇಕೆಂದು ನನ್ನ ಸಲಹೆ.

*ಶ್ರೀ ಟಿ. ಮಾದಯ್ಯಗೌಡರು (ಬೆಂಗಳೂರು ಜಿಲ್ಲೆ).—ಸ್ವಾಮಿ, ಜಮೀನುಗಳಿಗೆ ಹಾಕತಕ್ಕ ಅರ್ಜಿಗಳನ್ನು ಜಾಗ್ರತೆ ವಿಲೇ ಮಾಡಬೇಕು. ಹಾಗೆಯೇ ಇತರ ಎಲ್ಲ ಅರ್ಜಿಗಳನ್ನೂ ಜಾಗ್ರತೆ ವಿಲೇ ಮಾಡಬೇಕು. ಜಮೀನು ದರಖಾಸ್ತು ಅರ್ಜಿಗಳನ್ನು ಜಾಗ್ರತೆ ವಿಲೇ ಮಾಡುವುದಕ್ಕೆ ಕೆಲವು ಅನುಕೂಲಗಳನ್ನು ಮಾಡಿಕೊಂಡರೆ ಒಳ್ಳೆಯದೆಂದು ನನಗೆ ತೋರುತ್ತದೆ. ಪ್ರತಿಯೊಂದು ಊರಿನಲ್ಲಿಯೂ ಖಾಸಗಿ ಜನರಿಗೆ ಅಥವ ರೈತರಿಗೆ ವ್ಯವಸಾಯಕ್ಕೆ ಕೊಡಬಹುದಾದ ಸರ್ಕಾರಿ ಜಮೀನೆಷ್ಟಿದೆ, ಯಾವ ಯಾವ ಸರ್ವೆ ನಂಬರಿನಲ್ಲಿದೆ ಎಂಬ ವಿವರಗಳ ಬಗ್ಗೆ ಪ್ರತಿ ಗ್ರಾಮಕ್ಕೂ ಲೆಕ್ಕವನ್ನು ತಗೆದು ಕೊಂಡು ಆಯಾ ಗ್ರಾಮದಲ್ಲಿ ಆ ಲೆಕ್ಕವನ್ನು ಇಡದೇ ಯಿದ್ದರೂ ತಾಲ್ಲೂಕು ಕಚೇರಿಯಲ್ಲಿಟ್ಟಿದ್ದರೆ ಒಳ್ಳೆಯದು. ಆಯಾ ಗ್ರಾಮದ ಒಡವರು ಯಾರಾದರೂ ಅರ್ಜಿ ಹಾಕಿದರೆ ಆ ಅರ್ಜಿಗಳನ್ನು ರಿಜಿಸ್ಟರು ಮಾಡಿಕೊಂಡು ಯಾರು ಯಾರಿಗೆ ಜಮೀನು ಬೇಕೋ ಯಾರು ಯಾರಿಗೆ ಜಮೀನು ಕೊಟ್ಟರೆ ಪ್ರಯೋಜನವಾಗುತ್ತದೆಯೋ ಅಂಥವರಿಗೆ ವಿಲೇ ಮಾಡುವ ಪದ್ಧತಿಯನ್ನು ಸರ್ಕಾರದವರು ಅನುಸರಿಸಿದರೆ ಅನೇಕ ತೊಂದರೆಗಳು ನಿವಾರಣೆಯಾಗುತ್ತವೆಂದು ನನಗೆನಿಸುತ್ತದೆ. ಈಗ ಏನಾಗುತ್ತಿದೆಯೆಂದರೆ, ಯಾವುದಾದರೂ ಒಂದು ಕಡೆ ಒಂದು ಸರ್ಕಾರಿ ಜಮೀನಿದ್ದರೆ ಅದು ಗ್ರಾಮ ಸಮಾಜಕ್ಕೇ ನಾದರೂ ಉಪಯೋಗಕ್ಕೆ ಬೇಕೆಂದು ಕಂಡುಬಂದರೆ ಆ ಜಮೀನನ್ನು ಕೊಡಬಾರದೆಂದು ಹೇಳುವವರು ಗ್ರಾಮಸ್ಥರು, ಅನೇಕ ಸಂದರ್ಭಗಳಲ್ಲಿ ಕೆಲವು ಬಡವರು ಅರ್ಜಿ ಹಾಕಿದರೆ ಆ ಜಮೀನು ಗ್ರಾಮಕ್ಕೆ ಸೇರಿದ್ದು ಕೊಡಬಾರದೆಂದು ಹೇಳಿಬಿಡುತ್ತಾರೆ. ಅದೇ ಯಾರಾದರೂ influence ಮಾಡಿ ಆ ಜಮೀನನ್ನು ಪಡೆಯಬೇಕೆಂದರೆ, ಅದಕ್ಕೆ ಸರಿಯಾದ ರಿಕಾರ್ಡುಗಳನ್ನು ಹೊಂದಿಸಿ ಅವರಿಗೆ ಜಮೀನು ಕೊಡುವಂತೆ ಮಾಡುವುದು, ಹೀಗೆ ಆಗುತ್ತದೆ. ಇಂತಿಂಥಾ ಜಮೀನನ್ನು ಕೊಡಬಾರದೆಂಬುದು, ಆಯಾ ಗ್ರಾಮಕ್ಕೆ ಆಗತ್ಯವಾಗಿ ರಿಜರ್ವ್ ಆಗಿರುವುದೂ ಖೇತ್ವಾರಿನಲ್ಲಿ ನಮೂದಾಗಿರುತ್ತದೆ. ಇಂತಹ ಜಮೀನುಗಳನ್ನು ಕೂಡ ಕೆಲವು ಸಂದರ್ಭಗಳಲ್ಲಿ ದರಖಾಸ್ತು ಕೊಟ್ಟುಬಿಡುತ್ತಾರೆ. ಒಂದೊಂದು ವೇಳೆ ಒಂದು ಸಾರಿ ವಿಲೇ ಆಗಿರುವ

ಜಮೀನಿನಿಗೇ ದರಖಾಸ್ತು ಬಂದು ಅದನ್ನೇ ಮತ್ತೊಬ್ಬರಿಗೆ ಕೊಡತಕ್ಕ ಸಂದರ್ಭ ಬರುತ್ತದೆ. ಹೀಗಾಗಬಾರದು ಸರಿಯಾಗಿ ನೋಡಿದರೆ, ಯಾವ ಯಾವ ಗ್ರಾಮದಲ್ಲಿ ಯಾವ ಯಾವ ಜಮೀನು ಎಷ್ಟೆಷ್ಟು ಎಕರೆ ವಿಲೇ ಮಾಡಬಹುದೆಂಬುದು ನಿಗದಿಯಾಗಿರುತ್ತದೆ. ಇಂತಹ ಜಮೀನುಗಳನ್ನು ಮಾತ್ರ ದರಖಾಸ್ತು ಕೊಡಬಹುದು. ಕೆಲವು ವೇಳೆ ಒಂದೇ ಜಮೀನಿಗೆ ನೂರಾರು ಅಥವ ಸಾವಿರಾರು ದರಖಾಸ್ತು ಅರ್ಜಿಗಳು ಬರುತ್ತವೆ. ಬಡವರೂ ಜಮೀನಿಲ್ಲದವರೂ ಆ ಗ್ರಾಮದಲ್ಲೇ ವಾಸವಾಗಿರುವವರೂ ಅರ್ಜಿ ಹಾಕಿರುತ್ತಾರೆ: ಪಕ್ಕದ ಹಳ್ಳಿಯವರೂ ಹಾಕಿರುತ್ತಾರೆ. ದೂರದಲ್ಲಿರುವವರೂ ಹಾಕಿರುತ್ತಾರೆ. ಆಯಾ ಹಳ್ಳಿಯವರಿಗೆ ಸಿಕ್ಕದೆ ದೂರದ ಹಳ್ಳಿಯವರಿಗೆ ದೊರೆತಿರುವ ಅನೇಕ ಸಂದರ್ಭಗಳಿವೆ. ಸರಿಯಾಗಿ ನೋಡಿ, ಸರಿಯಾದ ನೀತಿಯನ್ನನುಸರಿಸಿದರೆ ಬಹುಮಟ್ಟಿಗೆ ಜನರಿಗೆ ಅನುಕೂಲವಾಗುತ್ತದೆ. ಇದಕ್ಕೆ ನಾನು ಹೇಳಿದ ಹಾಗೆ ಒಂದು ಕರಾರುವಾಕ್ಕಾದ ಜಮೀನಿನ ಪಟ್ಟಿಯಿರಬೇಕು. ಅಲ್ಲದೆ ಆಯಾ ಗ್ರಾಮದಲ್ಲಿ ಜಮೀನು ಪಡೆದು ವ್ಯವಸಾಯ ಮಾಡಬಹುದಾದ ರೈತರ ಪಟ್ಟಿಯೂ ಇರಬೇಕು. ಇಂತಹ ರೈತರು ಅರ್ಜಿ ಹಾಕಿದರೆ ಅವರಿಗೆ ಜಮೀನುಕೊಟ್ಟರೆ ಅನುಕೂಲವಾಗುತ್ತದೆ.

ಅಧ್ಯಕ್ಷರು.—ಆ ವಿಷಯ ಬೇರೆಯಾಯಿತು, ಯಾರಿಗೆ ಜಮೀನು ಕೊಟ್ಟರೆ ಅನುಕೂಲವೆಂಬುದನ್ನು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಖೋತಾ ಸೂಚನೆ ಇರುವುದು ದರಖಾಸ್ತು ಅರ್ಜಿಗಳನ್ನು ಜಾಗ್ರತೆ ಹೇಗೆ ವಿಲೇ ಮಾಡಬೇಕೆಂಬ ವಿಷಯ.

ಶ್ರೀ ಟಿ. ಮಾದಯ್ಯಗೌಡರು.—ಒಂದು ಜಮೀನಿಗೆ ದರಖಾಸ್ತು ಅರ್ಜಿ ಬಂದರೆ ಅದು ಕೊಡತಕ್ಕ ಜಮೀನು ಹೌದೇ ಅಲ್ಲವೇ ಎಂಬುದನ್ನು ತಿಳಿದುಕೊಳ್ಳುವುದಕ್ಕೇ ಅನೇಕ ಸಾರಿ ರಿಕಾರ್ಡು ಮೇಲಕ್ಕೂ ಕೆಳಕ್ಕೂ ಹೋಗಿ ತಡವಾಗುತ್ತದೆ. ನಾನು ಹೇಳಿದ ಹಾಗೆ ಪ್ರತಿಯೊಂದು ಗ್ರಾಮದಲ್ಲಿಯೂ ಯಾವ ಯಾವ ಜಮೀನನ್ನು ಕೊಡಬಹುದು ಎಂಬುದರ ಪಟ್ಟಿಯನ್ನಿಟ್ಟುಕೊಂಡಿದ್ದರೆ ದರಖಾಸ್ತು ಅರ್ಜಿಗಳು ಬಂದರೆ ಬೇಗ ಸರಿಯಾಗಿ ವಿಲೇ ಮಾಡಲು ಬಹಳ ಅನುಕೂಲವಾಗುತ್ತದೆ. ಯಾವ ಯಾವ ಜಮೀನು ಗ್ರಾಮಸಮಾಜಕ್ಕೆ ಸೇರಿದುದು ಎಂಬುದು ಸ್ಪಷ್ಟವಾಗಿರಬೇಕು. ಕೆಲವು ವೇಳೆ ಇದು ಗೊತ್ತಿದ್ದರೂ ಕೂಡ, ಕೆಲವರು ಅರ್ಜಿ ಹಾಕಿದರೆ ಕೊಟ್ಟುಬಿಡುತ್ತಾನೆ, ಬೇರೆಯವರು ಹಾಕಿದರೆ ಕೊಡುವುದಕ್ಕಾಗುವುದಿಲ್ಲವೆಂದು ಹೇಳುತ್ತಾರೆ. ಇದರಿಂದ ಜನರಿಗೆ ಅನೇಕ ಸಾರಿ ಕಚೇರಿಗಳಿಗೆ ತಿರುಗಬೇಕಾಗಿ ಕಷ್ಟವಾಗುತ್ತದೆ. ಆದಕಾರಣ ನಾನು ಹೇಳಿದಂತೆ ಯಾವುದಾದರೂ ಒಂದು ಸರಿಯಾದ ಕ್ರಮವನ್ನನುಸರಿಸಿದರೆ ಅನುಕೂಲವಾಗುತ್ತದೆಂದು ನನ್ನ ಭಾವನೆ.

ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಪಶ್ಚಿಮ).—ಸ್ವಾಮಿ, ಈ ಕತ್ತರಿ ನಿರ್ಣಯದಲ್ಲಿ ಎರಡು ವಿಷಯಗಳನ್ನು ಸೂಚಿಸಿದ್ದಾರೆ.

ಅಧ್ಯಕ್ಷರು.—ಅದರಲ್ಲಿರುವುದು ಒಂದೇ ವಿಷಯ.

ಶ್ರೀ ಎಸ್. ರಂಗರಾಮಯ್ಯನವರು.—ಅರ್ಜಿ ತೀರ್ಮಾನವಾಗುವುದು ಕಾಲಾತೀತವಾಗುತ್ತದೆ ಮತ್ತು ದರಖಾಸ್ತು ಅರ್ಜಿ ಹಾಕುವವರಿಗೆ ತೊಂದರೆಯಾಗುತ್ತದೆ ಎಂದು ಎರಡು ಕಾರಣ ಹೇಳಿದ್ದಾರೆ. ಶ್ರೀ ಪಾಪಣ್ಣಗೌಡರು ತೊಂದರೆ ವಿಷಯದಲ್ಲಿ ಹೇಳಿದರು. ಕಾಲಾತೀತವಾಗುತ್ತದೆ ಎಂಬುದಕ್ಕೆ ನರಿಯಾದ ಉದಾಹರಣೆಯನ್ನು ಕೊಡಲಿಲ್ಲ, ಆದುದರಿಂದ ಈ ನಿರ್ಣಯ ಅನಿರ್ದಿಷ್ಟವಾಗಿದೆ. ಮಾನ್ಯ ಸದಸ್ಯರು ಕೆಲವರು ಒಂದು ಕಾಲವನ್ನು ಗೊತ್ತುಮಾಡಬೇಕಾಗಿತ್ತೆಂದು ಹೇಳಿದರು. ಇದು ಸಾಧ್ಯವಿಲ್ಲ. ಒಂದು ಪರಮಾವಧಿ ಕಾಲವನ್ನು ಗೊತ್ತು ಮಾಡಬಹುದೇ ವಿನಾ ಇಷ್ಟೇ ಕಾಲದಲ್ಲಿ ತೀರ್ಮಾನಮಾಡಬೇಕೆಂದು ಹೇಳಿದರೆ ಅನೇಕ ಸಂದರ್ಭಗಳಲ್ಲಿ ತೊಂದರೆ ಬರುತ್ತದೆ. ಮೊದಲು ದರಖಾಸ್ತು ಅರ್ಜಿ ಹಾಕಿದವರು ಜಮೀನನ್ನು ಹರಾಜು ಮಾಡಬಾರದು upset price ಗೆ ಕೊಡಬೇಕೆಂದು ಕೇಳಿರುತ್ತಾರೆ. ಕೆಲವು ಕಡಿಮೆ ಮೊಬಲಗಿಗೆ ಕೊಡಬೇಕೆಂದು ಕೇಳಿರುತ್ತಾರೆ. ಇದನ್ನು ರೆವಿನ್ಯೂ ಇನ್‌ಸ್ಪೆಕ್ಟರು ಆ ಗ್ರಾಮಕ್ಕೆ ತೆಗೆದುಕೊಂಡು ಹೋಗಿ ತನಿಖೆ ಮಾಡಿ ಪಟೇಲ ಶ್ಯಾನುಭೋಗರು ಪಂಚಾಯಿತಿಯವರು ಹೆಚ್ಚು ಬೆಲೆ ಕಟ್ಟಿದರೆ ಅರ್ಜಿದಾರರು ಅದು ಜಾಸ್ತಿ ಎಂದು ಮೇಲ್ಪಟ್ಟ ಅಧಿಕಾರಿಗಳಿಗೆ ಅರ್ಜಿಕೊಡುತ್ತಾರೆ. ಇಂತಹ ಕಾರಣದಿಂದ ಕೂಡ ದರಖಾಸ್ತು ಪೈಸಲಾಗಲು ನಿಧಾನವಾಗುತ್ತದೆ.

ಎರಡನೆಯದಾಗಿ ಅಮಲ್ದಾರರಿಗೆ ಇಂತಹ ಅಧಿಕಾರದಲ್ಲಿ ಇಷ್ಟು ಎಕರೆ ಕೊಡಬೇಕು,—ಸುಮಾರು 4 ಎಕರೆಗಳತನಕ, ಮತ್ತು ಜಿಲ್ಲಾಧಿಕಾರಿಗಳು ಅವರಿಗಿರತಕ್ಕ ಅಧಿಕಾರ ವ್ಯಾಪ್ತಿಯಲ್ಲಿ 4—6 ಎಕರೆಗಳತನಕ ಕೊಡಬಹುದೆಂದೂ, ಅದಕ್ಕೆ ಮೇಲ್ಪಟ್ಟಿದ್ದಲ್ಲಾ ಸರ್ಕಾರದ ತೀರ್ಮಾನಕ್ಕೆ ಬರಬೇಕಾದ್ದು ಎಂಬೀ ರೀತಿಯಾಗಿ ಈ ಕಾರಣದಿಂದ ತಾವು ಒಂದು ಪರಮಾವಧಿಕಾಲ ಕ್ಲುಪ್ತ ಮಾಡಬೇಕಾದ್ದು ಅಗತ್ಯವಾಗಿರುತ್ತೆಂದು ಹೇಳುತ್ತೇನೆ. ಮತ್ತೊಂದು ಕಡೆ ದರಖಾಸ್ತುಗಳ ಬಗ್ಗೆ ನಡೆಸತಕ್ಕ ರಿಕಾರ್ಡುಗಳು ಸಹ ಸರಿಯಾಗಿ ನಕಾಲದಲ್ಲಿ ತನಿಖೆಯಾಗುತ್ತಿಲ್ಲ. ಈ ಬಗ್ಗೆ ವಿಶೇಷ ಕಾಲವನ್ನು ಅವರೀಗ ತೆಗೆದುಕೊಳ್ಳುತ್ತಿದ್ದಾರೆ. ಆದರೆ ಕೆಲವು ನನ್ನಿವೇಶಗಳಲ್ಲಿ ಎಲ್ಲ ಜಮೀನುಗಳನ್ನೂ ಕೊಡಕೂಡದೆಂದು ಮತ್ತು ಅಂಥದ್ದಕ್ಕೆ ಅವಕಾಶವಿಲ್ಲವೆಂದು ತಡೆದುಕೊಂಡಿರುತ್ತಾರೋ ಅಂಥಾ ಜಮೀನುಗಳಿಗೆ ಜನರು ಅರ್ಜಿ ಹಾಕುವುದು ಜಾಸ್ತಿಯಾಗಿರುತ್ತದೆ. ಆದರೆ ಈ ಬಗ್ಗೆ ಮಾನ್ಯ ಸದಸ್ಯರುಗಳಾದ ಶ್ರೀ ಟಿ. ಮಾದಯ್ಯಗೌಡರು ಮತ್ತು ಬಿ. ಹುಚ್ಚೇಗೌಡರು ತಿಳಿಸಿದ ಹಾಗೆ ಇಂಥಾ ಜಮೀನುಗಳ ಒಂದು ಪಟ್ಟಿಯನ್ನು ತಯಾರಿಸಿ ಅದನ್ನು ಸೂಕ್ತವೆಂದು ತೋರಿಬರುವ ಒಂದು ಸ್ಥಳದಲ್ಲಿ ಇಡತಕ್ಕ ಏರ್ಪಾಡನ್ನು ಮಾಡುವ ಬಗ್ಗೆ ಮಾನ್ಯ ರೆವಿನ್ಯೂ ಮಂತ್ರಿಗಳು ತಮ್ಮ ಗಮನದಲ್ಲಿ, ಈ ವಿಚಾರವನ್ನಿಟ್ಟುಕೊಳ್ಳಬೇಕೆಂಬುದಾಗಿ ನಾನು ಪ್ರಾರ್ಥಿಸುತ್ತೇನೆ. ಇದನ್ನು ಗ್ರಾಮದಲ್ಲಿಡುವಂತೆ ಮಾಡಿದರೆ ಅವರ ಜನರಿಗಾರಿಗೂ ಅದನ್ನು ತೋರಿಸುವುದೇ ಇಲ್ಲ. ದರಖಾಸ್ತುಗಳ ಬಗ್ಗೆ ವಿಲೇವಾರಿಯಾಗಲು ಯಾವ ಜಮೀನುಗಳು ಬಹಳ ಲಾಯಕ್ಕಾಗಿರುತ್ತವೆಯೋ ಅಂಥಾ ಜಮೀನುಗಳನ್ನು ಗ್ರಾಮದ ಪಟೇಲ್ ಶ್ಯಾನುಭೋಗರುಗಳು ಒಂದನ್ನೂ ಹೊರಗಡೆಗೆ ಗುಚ್ಚೇಕೊಡುವುದಿಲ್ಲ. ಇಂದು ನಡೆಯುತ್ತಿರುವ ವಿಧಾನಗಳನ್ನು ನಾನೀಗ ತಮಗೆ ತಿಳಿಸುತ್ತಿದ್ದೇನೆ. ಆದರೆ ಇದನ್ನು ತಾಲ್ಲೂಕಿನಲ್ಲಿ ಇಡಬೇಕೆಂದೇ ನನ್ನ ಅಭಿಪ್ರಾಯ. ಆದರೆ ಈ ಎಲ್ಲಾ ಅಭಿಪ್ರಾಯಗಳನ್ನೂ ಕ್ರೋಢೀಕರಿಸಿ ಎಲ್ಲೆ ಇಟ್ಟರೆ ಸೂಕ್ತವೆಂದು ತೋರಿಬರುತ್ತದೋ ಅಲ್ಲಿಟ್ಟರೆ ಅನುಕೂಲ. ಆದರೆ ಎಲ್ಲಿ ದರಖಾಸ್ತು ಜಮೀನುಗಳು ಇದ್ದು, ಅಂಥಾದ್ದು 1 ವರ್ಷದ ಅವಧಿಯಲ್ಲಿ ತೀರ್ಮಾನ ಮಾಡಬೇಕೆಂದು ನಿರ್ಧರಿಸುವ ಬದಲು ಒಂದೂವರೆ ವರ್ಷಕ್ಕಿಂತ ಜಾಸ್ತಿಯಾಗಿರಬಾರದೆಂದು ತಾವು ಒಂದು ಸೂಚನೆ ಕೊಟ್ಟರೆ ಅದರಿಂದ ಬಹಳ ಅನುಕೂಲವಾಗುತ್ತದೆ. ಈ ಕಾರಣಗಳಿಂದ ಅವರು ತಂದಿರುವ ಖೋತಾ ಸೂಚನೆಯನ್ನು ನಾನು ಸ್ವಾಗತಿಸುತ್ತೇನೆ.

ಶ್ರೀ ಎಂ. ಮಾದಯ್ಯನವರು (ಮೈಸೂರು ಜಿಲ್ಲೆ ನಿಮ್ಪಂಗಡ).—ಸ್ವಾಮಿ, ಜಪ್ತಿಯಾನುಗಳನ್ನು ಕೊಡುತ್ತಿರುವ ವಿಚಾರದಲ್ಲಿ ಅನೇಕ ತೊಂದರೆಗಳುಂಟಾಗುತ್ತಿವೆ. ಈ ತೊಂದರೆಗಳನ್ನು ನಿವಾರಣೆ ಮಾಡತಕ್ಕ ಬಗ್ಗೆ . . . .

ಅಧ್ಯಕ್ಷರು.—ನಭೆಯ ಮುಂದೆ ಇರತಕ್ಕ ಸೂಚನೆ, ನಿಧಾನವಾಗದಿರುವುದರ ಬಗ್ಗೆ ಏನು ಮಾಡಬೇಕೆಂಬ ತಕ್ಕದ್ದು. ಅಷ್ಟು ಹೊರತು ತೊಂದರೆ ಮತ್ತು ಇತರ ವಿಚಾರಗಳನ್ನು ಇದರಲ್ಲಿ ಮಾತನಾಡಲಿಕ್ಕೆ ಅವಕಾಶ ವಿಲ್ಲ.

ಶ್ರೀ ಎಂ. ಮಾದಯ್ಯನವರು.—ಆದರೆ ಈ ಖೋತಾ ಸೂಚನೆಯಲ್ಲಿರತಕ್ಕದ್ದು delay & hardships ಎಂದು ನಾನು ಇದರಲ್ಲಿ ಅರಿಕೆ ಮಾಡಿ ಕೊಳ್ಳ ಬೇಕೆಂದಿರುವುದು ಹರಿಜನರಿಗೆ ಜಪ್ತಿಯಾನು ಕೊಡ ತಕ್ಕದ್ದರಲ್ಲಿ ಕೇವಲ ಒಂದು ನೂರು ರೂಪಾಯಿ ಗಳ ಬೆಲೆಯೊಳಗಿದ್ದರೆ ಮಾತ್ರವೇ ಮುಫತ್ತಾಗಿ ಕೊಡ ಬೇಕು, 100 ಅಥವಾ 150 ರೂ. ಗಳಿಗಿಂತ ಹೆಚ್ಚಿನ ಬೆಲೆಯ ಜಪ್ತಿಯಾನುಗಳನ್ನು ಇವರಿಗೆ ಕೊಡದಂತೆ (ಮುಫ ತ್ತಾಗಿ) ನಿಯಮಗಳಿವೆ.

ಅಧ್ಯಕ್ಷರು.—ಈ ವಿಚಾರಕ್ಕೇ ಬೇರೆ ಖೋತಾ ಸೂಚನೆಗಳಿವೆ. ಆ ಸೂಚನೆಗಳು ಬಂದಾಗ ತಾವು ಆ ಬಗ್ಗೆ ಮಾತನಾಡಬಹುದು.

ಶ್ರೀ ಎಂ. ಮಾದಯ್ಯನವರು.—ಈ ದರಖಾಸ್ತು, ಅರ್ಜಿಗಳ ಬಗ್ಗೆ ನಿಮ್ಪಂಗಡದವರಿಗೆ ಇರತಕ್ಕ ತೊಂದರೆಗಳೇನೆಂಬುದನ್ನು ತಮ್ಮ ಮತ್ತು ಈ ಮಾನ್ಯ ಸಭೆಯ ಗಮನಕ್ಕೆ ತರುತ್ತಿದ್ದೇನೆ, ಅಷ್ಟೆ.

Since the cut motion relating to the land revenue rule, tabled by me is not included in the agreed list given to the Hon'ble Speaker, I may be permitted to express my views in the matter.

Mr. SPEAKER.—But the Hon'ble Member cannot discuss it now in connection with this cut motion.

Sri M. MADIAH.—I seek the permission of the Chair to make a few observations only with regard to the hardships felt by the Darkhast applicants. So I may kindly be permitted to speak.

Sri H. K. VEERANNA GOWDA (Mandya District—General).—Hardships caused on account of the delay.

(Sri N. Ranga Rao was found reading a newspaper)

Sri M. N. JOIS (Mysore District—General).—On a point of order. An Hon'ble Member is reading a newspaper. Is it permissible in this House?

ಶ್ರೀ ಎಂ. ಮಾದಯ್ಯನವರು.—ಈ ನಿಮ್ಪಂಗಡದವರು ಹಾಗೋ ಹೀಗೋ ಮಾಡಿ ಎಲ್ಲೆಲ್ಲಿ ವ್ಯವಸಾಯಕ್ಕೆ ಜಪ್ತಿಯಾನು ದೊರೆಯಬಹುದೆಂದು ತಿಳಿದು ಬರುತ್ತದೆಯೋ ಅಂಥಾ ಕಡೆಗಳಲ್ಲಿ ಜಪ್ತಿಯಾನಿರುತ್ತೆ, ಅದರ ಪೈಕಿ ಇಷ್ಟನ್ನು ನಮಗೆ ಡಿಪ್ರೆಸ್ಡ್‌ಕ್ಲಾಸ್ ರೂಲ್ಸು ಪ್ರಕಾರ ವ್ಯವಸಾಯಕ್ಕೆ ಕೊಡಿಸಿಕೊಡಬೇಕೆಂದು ಅರ್ಜಿ ಹಾಕಿ ದೊಡನೆಯೆ ಅಂಥಾ ಆ ಜಪ್ತಿಯಾನಿಗೆ ಕೇವಲ 50 ರೂಪಾಯಿ, 100 ರೂಪಾಯಿ ಬೆಲೆ ಬಾಳಬಹುದಾಗಿದ್ದರೆ ಅದನ್ನೇ 150 ರೂಪಾಯಿ ಬೆಲೆ ಬಾಳುತ್ತೆಂದು, ಸ್ಥಳದಲ್ಲಿರಿಕಾರ್ಡು ಮಾಡಿ ಅದನ್ನು ಮೇಲಕ್ಕೆ ಕಳುಹಿಸಿ ಬಿಟ್ಟರೆ, ಅವರು ಅದನ್ನು ಹೆಚ್ಚು ಬೆಲೆ ಬಾಳುವುದರಿಂದ ಕೊಡುವುದಕ್ಕಾಗುವುದಿಲ್ಲ. ರಿಕಾರ್ಡ್ಸನ್ನು File ಮಾಡಿ ಬಿಡಿ ಎಂದು ನುಲಭವಾಗಿ ಫೈಸಲ್ ಮಾಡಿಬಿಡುತ್ತಾರೆ. ಹಾಗೆ ಕಾನೂನಿನಲ್ಲಿ ನಿಮ್ಪಂಗಡದವರಿಗೆ ಮುಫತ್ತಾಗಿ ಕೊಡಬೇಕೆಂದು ಹೇಳಿರುವುದರಿಂದ, ಆಗ್ಗೆ ಕೊಡತಕ್ಕದ್ದನ್ನು ತಡೆಗಟ್ಟುವ ನಲುವಾಗಿ ಅಥವಾ ಅದನ್ನು ತಪ್ಪಿಸತಕ್ಕ ಬಗ್ಗೆ ಹೀಗೆ ಬೆಲೆ ಏರಿಸಿ ಅವರಿಗೆ ತೊಂದರೆಯಾಗುತ್ತಿದೆಯೆಂಬುದು ಇದರಲ್ಲಿ ಒಂದು ಮುಖ್ಯವಾದ ಅಂಶ. ಅದನ್ನು ನಾನೀಗ ತಮ್ಮ ಗಮನಕ್ಕೆ ತಂದಿದ್ದೇನೆ. ಇಷ್ಟೇ ಅಲ್ಲದೆ ಈ ಬಗ್ಗೆ ಅಂದರೆ ದರಖಾಸ್ತು ಅರ್ಜಿಗಳ ವಿಚಾರದಲ್ಲಿ ರೆವಿನ್ಯೂ ಇನ್‌ಸ್ಪೆಕ್ಟರುಗಳು ತಾಲ್ಲೂಕಾಮಳೆ ಇರತಕ್ಕ ಪ್ರತಿ ಯೊಂದು ಹಳ್ಳಿಗೂ ಹೋಗಿ ಎಲ್ಲೆಲ್ಲಿ ಜಪ್ತಿಯಾನುಗಳಿರುತ್ತದೆಯೋ ಅಲ್ಲೇ ರಿಕಾರ್ಡು ಮಗ್ಗೈರೆಗಳನ್ನು ಸಕಾಲದಲ್ಲಿ ಮಾಡುತ್ತಿಲ್ಲ. ಹಾಗೆ ಮಾಡದಿರುವುದರಿಂದ ಪಾರ್ಟಿಗಳು ಅವರ ಮನೆಯ ಬಾಗಿಲಿಗೆ ಬೇಕಾದಷ್ಟು ಸಾರ್ತಿ ಸುತ್ತುತ್ತಿರಬೇಕಾಗಿದೆ. ಹೀಗೆ ಯಾರಾದರೂ ಜಪ್ತಿಯಾನು ಕೊಡಬೇಕೆಂದು ಒಂದು ಅರ್ಜಿ ಹಾಕಿಕೊಂಡರೆ ಅದನ್ನು ಎಷ್ಟು ದಿವಸಗಳೊಳಗಾಗಿ ತೀರ್ಮಾನ ಮಾಡ ಬೇಕೆಂಬುದರ ಬಗ್ಗೆ ಕಾಲ ನಿಗದಿಯನ್ನೇ ಮಾಡಿರುವು ದಿಲ್ಲ. ಆದುದರಿಂದ ಈ ಬಗ್ಗೆ ಸರ್ಕಾರದವರು ಒಂದು ಸರ್ಕ್ಯುಲರನ್ನು ಹೊರಡಿಸಿ ಅಥವಾ ರೆವಿನ್ಯೂ ಕಮಿಷನರಿಂದಲಾದರೂ ಈ ಬಗ್ಗೆ ಒಂದು ಸರ್ಕ್ಯುಲರ್ ಹೊರ ಡಿಸಿ ಪ್ರತಿ ತಿಂಗಳ 5ನೆಯ ತಾರೀಖು ಥಫ್ಟರ್ ಇನ್‌ಸ್ಪೆಕ್ಷನ್ ಕಾಲಕ್ಕೆ ಹೀಗೆ ದರಖಾಸ್ತ್ ಬಗ್ಗೆ ಬಂದಿದ್ದ ಅರ್ಜಿಗಳು ಎಷ್ಟೆಷ್ಟು ವಿಲೇವಾರಿ ಆಗಿವೆ, ಆಗದೆ ಬಾಕಿ ಎಷ್ಟು ನಿಂತಿರುತ್ತವೆ, ಮತ್ತು ಹಾಗೆ ನಿಲ್ಲಲು ಕಾರಣ ವೇನು ಎಂಬುದನ್ನೆಲ್ಲಾ ಸರಿಯಾಗಿ ಚೆಕ್ಕಿಂಗ್ ಮಾಡುವಂತೆ ಮಾಡಬೇಕೆಂದು ಸೂಚಿಸುತ್ತೇನೆ. ಈಗಲೂ ಸಹ ಆ ದಫ್ತರ್ ಚೆಕ್ಕಿಂಗ್ ನಡೆಯುತ್ತಲೇ ಇದೆ. ಆದರೆ ಅದು ಕ್ರಮವರಿತು ಸರಿಯಾಗಿ ಆಗುತ್ತಿಲ್ಲ. ಸಬ್-ಡಿವಿಜ಼ನ್ ಆಫೀಸರುಗಳು ಈ ದಫ್ತರ್ ಚೆಕ್ ಮಾಡಿ ದಂಥಾ ಕಾಲದಲ್ಲೇ ಫೈನಲಾಗದೆ ಇದ್ದ 4-5-6 ವರ್ಷಗಳ ಅರ್ಜಿಗಳು ಹಾಗೆಯೇ ಅಮಾನತ್ತಿನಲ್ಲಿ ದ್ದಾಗ್ಯೂ ಅವುಗಳನ್ನು ನೋಡದೆ ಬಿಟ್ಟಿರುವುದು ಆಶ್ಚರ್ಯ. ಹೀಗೆ ಎಷ್ಟೋ ಕಡೆ ಈಗಲೂ ನಡೆಯುತ್ತಿದೆ. ಇನ್‌ಸ್ಪೆಕ್ಟ್ ಮಾಡುವ ಅಧಿಕಾರಿಗಳಿಗೆ ರೆವೆನ್ಯೂ ಇನ್‌ಸ್ಪೆಕ್ಟರುಗಳು ಹಳೇ ರಿಕಾರ್ಡುಗಳನ್ನು ತೋರಿಸುವುದಿಲ್ಲ.

ಇನ್ನು ಈ ಖಾಲಿ ಬಿದ್ದಿರುವ ಜಪ್ತಿಯಾನುಗಳ ಬಗ್ಗೆ ಒಂದು ಪಟ್ಟಿಯನ್ನು ತಯಾರಿಸಬೇಕೆಂಬುದರ ಬಗ್ಗೆ ಯಾವ ಒಂದು ಕಾರ್ಯಕ್ರಮವೂ ಆಗದೆಯಿರುವುದ ರಿಂದ, ಜನಸಾಮಾನ್ಯರಿಗೆ ಜಪ್ತಿಯಾನುಗಳು ಎಲ್ಲೆಲ್ಲಿವೆ, ಅವುಗಳ ಸರ್ವೆ ನಂಬರು, ಆಕಾರ ಇತ್ಯಾದಿಗಳನ್ನು ತಿಳಿದುಕೊಳ್ಳಲು ಒಂದು ಅವಕಾಶವೇ ಅವರಿಗೆ ದೊರೆ ಯದೆ ಹೋಗಿ ಅನೇಕರು ಬಹಳ ತೊಂದರೆಯಲ್ಲದ್ದಾರೆ. ಗ್ರಾಮಾಧಿಕಾರಿಗಳಿಗೆ ಈ ಬಗ್ಗೆ ಏನಾದರೂ ವಿಷಯ ಗಳನ್ನು ತಿಳಿದುಕೊಳ್ಳಬೇಕಾಗಿದ್ದರೆ, ಅವರಿಗೆ ನಂಥಾ ವನೆ ಮಗ್ಗೈರೆ ಬೇರೆ ಕೊಡಬೇಕಾಗಿದೆ. ಇದನ್ನು ಕೊಡದ ಏನಾ ಏನೂ ಸಾಧ್ಯವಾಗುವುದಿಲ್ಲ.

ಒಬ್ಬ ಮಾನ್ಯ ಸದಸ್ಯರು.—ಸಂಭಾವನೆ ಎಂದರೇನು?

ಶ್ರೀ ಎಂ. ಮಾದಯ್ಯನವರು.—ಸಂಭಾವನೇ ಎಂದರೆ ಕೈ ಬೆಚ್ಚಗೆ ಮಾಡುವುದು ಎಂದು. ಈ ಒಂದು ಅಭಿ ಪ್ರಾಯದಿಂದಲೇ ಪ್ರಾಯಶಃ ಈಗಾಗಲೇ ಮಾತನಾ

ಡಿದ ಮಾನ್ಯ ಸದಸ್ಯರುಗಳು ಈ ಪಟ್ಟಿಯನ್ನೇ ಗ್ರಾಮ ಗಳಲ್ಲಿರತಕ್ಕದ್ದು ಬೇಡವೆಂದು ತಿಳಿಸಿರಬಹುದು. ಈಗ ಯಾರಾದರೂ ಈ ತಾಲ್ಲೂಕು ಗುಮಾಸ್ತರು ಗಳಿಂದ ಅಂಥಾ ಖಾಲಿ ನಂಬರ್ ಜಮೀನುಗಳು ಎಲ್ಲೆಲ್ಲಿ ರುತ್ತವೆಂಬುದನ್ನು ತಿಳಿದು, ಆ ಬಗ್ಗೆ ಅರ್ಜಿಗಳನ್ನು ಹಾಕಿಕೊಂಡಿದ್ದಾಗಲೂ ಕೂಡ, ಈ ಗ್ರಾಮಾಧಿಕಾರಿ ಗಳು ಇಲ್ಲದ ವ್ಯವಹಾರಕ್ಕೆ ಅವಕಾಶಕಲ್ಪಿಸಿ, ಅವುಗಳು ಜನರಿಗೆ ದೊರೆಯದಂತೆ ಮಾಡಿರತಕ್ಕ ನಿದರ್ಶನಗಳು ಅನೇಕವಿವೆ. ಹೀಗೆಲ್ಲಾ ಆಗಿ ಅವರಿಗೆ ಕೈಬೆಚ್ಚಗಾಗದ ಏನಾ ಏನೂ ಕೆಲಸಗಳೇ ಆಗುವುದಿಲ್ಲ. ದಯವಿಟ್ಟು ಈ ತೊಂದರೆಗಳನ್ನೆಲ್ಲಾ ತಾವು ನಿವಾರಣೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಈಗ ಬಡವರಿಗೆ ಇದರ ಬಗ್ಗೆ ಬಹಳ ತೊಂದರೆಯಾಗುತ್ತಿದೆ. ಆದ ಕಾರಣ ಈ ಕಷ್ಟಗಳನ್ನೆಲ್ಲಾ ನಿವಾರಣೆ ಮಾಡುವುದರ ಜೊತೆಗೆ ಈ ಜಮೀನುಗಳ ಪಟ್ಟಿಯೊಂದನ್ನೂ ಸಹ ಎಲ್ಲಾ ತಾಲ್ಲೂಕು ಕಚೇರಿಗಳಲ್ಲೂ ಮತ್ತು ಎಲ್ಲೆಲ್ಲಿ ಬಹಿರಂಗ ವಾಗಿ ಜನರು ಸೇರಲು ಅವಕಾಶವಿರುತ್ತದೆಯೋ ಅಂಥಾ ಸ್ಥಳಗಳಲ್ಲಿಯೂ ಮತ್ತು ಗ್ರಾಮಪಂಚಾಯಿತಿ ಗಳಲ್ಲಿಯೂ ಇಟ್ಟು ಈ ಬಗ್ಗೆ ಅಡ್ವರ್ಟೈಜ್‌ಮೆಂನ್ನೇ ತಾವು ಮಾಡತಕ್ಕದ್ದು ಸೂಕ್ತವಾಗಿರುತ್ತೆಂದು ನಾನು ಸೂಚಿಸಲಿಚ್ಛಿಸುತ್ತೇನೆ. ಅಂತೂ ಒಟ್ಟಿನಲ್ಲಿ ಈ ವಿಚಾರ ಹೆಚ್ಚು ಹೆಚ್ಚು ಜನಗಳಿಗೆ ಗೊತ್ತಾಗತಕ್ಕ ರೀತಿಯಲ್ಲಿ ತಾವು ಒಂದು ಏರ್ಪಾಡನ್ನು ಮಾಡಬೇಕಾದ್ದು ಅತ್ಯ ಗತ್ಯವಾಗಿದೆ.

ಈ ರೀತಿ ಇನ್ನೂ ಕೆಲವು ಕಷ್ಟಗಳಿವೆ. ದರಖಾಸ್ತು ಕೊಟ್ಟಿರುವ ಅರ್ಜಿದಾರರಲ್ಲಿ ಕೆಲವರಿಗೆ ತೊಂದರೆ ಯಾಗಿರುವುದನ್ನು ನಿವಾರಣೆ ಮಾಡಬೇಕು. ನಿಮ್ಮ ವರ್ಗದವರು ಅರ್ಜಿಹಾಕಿದರೆ ಗೋಮಾಳದ ಜಮೀನನ್ನು ಕೊಡುವುದಕ್ಕಾಗುವುದಿಲ್ಲವೆಂದು ಹೇಳುತ್ತಾರೆ. ಅದೇ ಇತರರು ಅದೇ ಗೋಮಾಳದಲ್ಲಿರುವ ಜಮೀನಿಗೆ ಅರ್ಜಿ ಹಾಕಿದಾಗ ಅವರಿಗೆ ಕೊಟ್ಟಿದ್ದಾರೆ. ನಂಜನಗೂಡು ತಾಲ್ಲೂಕಿನಲ್ಲಿ ಇಂತಹ ಉದಾಹರಣೆಗಳಿವೆ; ಇಂಥ ತೊಂದರೆಗಳಿವೆ. ಆದ್ದರಿಂದ ದಯವಿಟ್ಟು ಜಿಲ್ಲಾಧಿ ಕಾರಿಗಳು ಸಬ್ ಡಿವಿಜ್ ಆಫೀಸರಿಂದ ತೊಂದ ರೆಯೇನಿದೆಯೆಂದು ತಿಳಿದು ನಿಮ್ಮ ವರ್ಗದವರಿಗಿರುವ ಕಷ್ಟವನ್ನು ನಿವಾರಣೆ ಮಾಡಿ ಜಾಗ್ರತೆ ಜಮೀನನ್ನು ಕೊಡುವುದಕ್ಕೆ ಸೂಕ್ತ ಏರ್ಪಾಡು ಮಾಡುತ್ತಾರೆಂದು ನಂಬಿದ್ದೇನೆ.

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ದರಖಾಸ್ತು ಅರ್ಜಿಗಳನ್ನು ವಿಲೇವಾರಿ ಮಾಡುವುದರಲ್ಲಿ ಕೆಲವು ಸಂದ ರ್ಭಗಳಲ್ಲಿ ಸ್ವಲ್ಪಮಟ್ಟಿಗೆ ತಡವಾಗುತ್ತಿದೆ ಎಂದು ಕಂಡು ಬಂದಿದೆ. ಆದರೆ ಕೆಲವು ಮಾನ್ಯ ಸದಸ್ಯರು ಹೇಳು ವಷ್ಟುಮಟ್ಟಿಗೆ ತಡವಾಗುತ್ತಿಲ್ಲ ಎಂಬುದು ನಾನು ಅನೇಕ ತಾಲ್ಲೂಕು ಆಫೀಸುಗಳಲ್ಲಿ ತನಿಖೆಮಾಡಿ ಹೇಳ ತಕ್ಕ ಮಾತಾಗಿದೆ. ದರಖಾಸ್ತು ಅರ್ಜಿಗಳು ಸಾಮಾ ನ್ಯವಾಗಿ ಇತ್ತೀಚೆಗೆ ಮೂರು ತಿಂಗಳೊಳಗಾಗಿ ಇತ್ಯ ರ್ಥವಾಗುತ್ತಿವೆ. ಇದರಲ್ಲಿ ಸ್ವಲ್ಪಮಟ್ಟಿಗೆ ಕಾಲವಿಳಂ ಬವಾಗಲು ಕೆಲವು ಕಾರಣಗಳಿವೆ. ದರಖಾಸ್ತುದಾರನು ಅರ್ಜಿ ಕೊಟ್ಟ ತಕ್ಷಣ ಅದನ್ನು ರೆವೆನ್ಯು ಇನ್‌ಸ್ಪೆಕ್ಟರಿಗೆ ಕಳುಹಿಸಿಕೊಡಬೇಕು; ಅವರು ಸ್ಥಳ ಪರಿಶೀಲನೆ ಮಾಡಿ, ನಕ್ಷೆ ತಯಾರುಮಾಡಿ, ಅರ್ಜಿದಾರ ಮತ್ತು ಗ್ರಾಮಸ್ಥರ ಎದುರಿನಲ್ಲಿ ವಿಚಾರಣೆ ಮಾಡಿ ವರದಿ ಮಾಡಬೇಕು; ಇದನ್ನೆಲ್ಲಾ ಮೂರು ತಿಂಗಳೊಳಗೆ ಮಾಡೇ ತೀರಬೇಕು ಎಂದು ಖಚಿತವಾಗಿ ತಿಳಿವಳಿಕೆ ಯನ್ನು ಈಚೆಗೆ ಸರ್ಕಾರದವರು ಕೊಟ್ಟಿದ್ದಾರೆ. ಅನೇಕ ಸಂದರ್ಭಗಳಲ್ಲಿ $1\frac{1}{2}$–2 ತಿಂಗಳಲ್ಲೇ ಇತ್ಯರ್ಥವಾಗಿ ರುವ ನೂರಾರು ಕೇಸುಗಳು ಈಚೆಗೆ ವರದಿಯಾಗುತ್ತಿವೆ.

ನಿಧಾನವಾಗುವುದಕ್ಕೆ ನಿಜವಾಗಿಯೂ ಇನ್ನೊಂದು ಕಾರಣವಿದೆ. ಅನೇಕ ಸಂದರ್ಭಗಳಲ್ಲಿ ಕೇಳುವ ಜಮೀನು ಅರಣ್ಯ ಇರಾಖೆ ಅಥವಾ ಅಮೃತಮಹಲ್ ಕಾವಲು ಅಂದರೆ ವ್ಯವಸಾಯದ ಇರಾಖೆ, ಇಲ್ಲವೇ ಈಚಲು ವನ ಅಂದರೆ ಎಕ್ಸೈಜು ಇರಾಖೆ, ಮುಂತಾದ ಇರಾಖೆಗಳಿಗೆ ಸಂಬಂಧಪಟ್ಟಿರುವುದರಿಂದ ಆಯಾಯಾ ಇರಾಖೆಗಳ ಅಧಿಕಾರಿಗಳ ಅಭಿಪ್ರಾಯವನ್ನು ಮೊದಲು ಕೇಳಬೇಕು. ಅದು ಸ್ವಲ್ಪ ನಿಧಾನವಾಗುತ್ತದೆ. ಆದರೂ ಕೂಡ ಆದಷ್ಟು ಬೇಗ ಈಚೆಗೆ ಕೆಲಸ ನಡೆಯುತ್ತಿದೆಯೆಂ ಬುದಕ್ಕೆ ಬೇಕಾದಷ್ಟು ಉದಾಹರಣೆಗಳನ್ನು ಕೊಡಬಲ್ಲೆ. ಹಾಗೆಯೇ ಕೆರೆ ಅಂಗಳವನ್ನು ಏರೆ ಮಾಡಬೇಕಾಗಿ ಬಂದಾಗ ಪಬ್ಲಿಕ್ ವರ್ಕ್ಸ್ ಇರಾಖೆಯವರ ಸಲಹೆಯನ್ನು ಕೇಳಬೇಕು. ಅಲ್ಲೂ ಸ್ವಲ್ಪ ನಿಧಾನವಾಗುತ್ತದೆ. ಇಷ್ಟು ಅವಕಾಶ ಕೊಟ್ಟರೂ ಸಾಮಾನ್ಯವಾಗಿ ಬಹಳ ನಿಧಾನ ವಾಗಿರುವ ಸಂದರ್ಭಗಳು ಬಹು ಅಪರೂಪ ಎಂಬು ದನ್ನು ಧೈರ್ಯವಾಗಿ ನಾನು ಈ ಸಂದರ್ಭದಲ್ಲಿ ಹೇಳ ಬಲ್ಲೆ. ಒಂದು ವರ್ಷಕ್ಕೆ ಮೇಲ್ಪಟ್ಟ ಸಂದರ್ಭಗಳು ನಾನು ತಾಲ್ಲೂಕು ಆಫೀಸುಗಳ ತನಿಖೆ ಮಾಡಿದಾಗ ಎರಡು ಮೂರಕ್ಕಿಂತ ಹೆಚ್ಚಾಗಿ ನನಗೆ ಕಂಡುಬರಲಿಲ್ಲ. ಆರು ತಿಂಗಳ ಮೇಲೆ ಎರಡು ವಿಲೇವಾರಿಯಾಗಿವೆ. ಹೀಗಿರುವಾಗ 8-10 ವರ್ಷಗಳಿಂದ ದರಖಾಸ್ತು ಅರ್ಜಿಗಳು ವಿಲೇವಾರಿಯಾಗದೆ ನಿಂತಿವೆ ಎಂಬ ಮಾತನ್ನು ನಂಬಲಾ ಗುವುದಿಲ್ಲ. ಅಂಥಹದು ಯಾವುದಾದರೂ ಇದ್ದರೆ ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ಅಥವಾ ನನ್ನ ಗಮನಕ್ಕೆ ತಂದರೆ ಆದಷ್ಟು ಬೇಗನೆ ತಕ್ಕ ಕಾರ್ಯ ಕ್ರಮ ಜರುಗಿಸಲಾಗುತ್ತೆಂದು ಭರವಸೆ ಕೊಡುತ್ತೇನೆ.

ಶ್ರೀ ಟಿ. ಸಿ. ಹೊನ್ನಪ್ಪನವರು (ಮೈಸೂರು ಜಿಲ್ಲೆ) – ದರಖಾಸ್ತು ಅರ್ಜಿ ತಮ್ಮ ಕೈಗೆ ನಾನೇ ಖುದ್ದಾಗಿ ಕೊಟ್ಟು $2\frac{1}{2}$ ವರ್ಷಗಳಾಯಿತು. ಆದರೆ ಈ ದಿವಸದ ವರೆಗೂ ಯಾವ ಜವಾಬೂ ಬಂದಿಲ್ಲ.

ಮಾನ್ಯ ಶ್ರೀ ಎಚ್. ಸಿದ್ಧಯ್ಯನವರು.—ಆ ಕೇಸಿನ ವಿಚಾರ ನನಗೆ ಜ್ಞಾಪಕವಿದೆ. ಅದನ್ನು ಈ ಸಭೆಯಲ್ಲಿ ಹೇಳುವುದು ಸರಿಯಲ್ಲ. ಅವರು ಹೇಳಿದ್ದು ಸರಿಯೇ ಎಂಬುದನ್ನು ಅವರೇ ಯೋಚನೆ ಮಾಡಬೇಕು. ನಾನು ಅದನ್ನು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಯಾವ ಸಂದ ರ್ಭದಲ್ಲೂ ಕೂಡ ಉದ್ದೇಶಪೂರ್ವಕವಾಗಿ ನಿಧಾನವಾ ಗುತ್ತಿಲ್ಲ ಎಂಬುದನ್ನು ಖಚಿತವಾಗಿ ನಂಬಬಹುದು.

ಆಮೇಲೆ ಜಮೀನುಗಳ ಒಂದು ಪಟ್ಟಿಯು ತಾಲ್ಲೂಕು ಆಫೀಸುಗಳಲ್ಲಿದ್ದರೆ ಸಹಾಯವಾಗುತ್ತದೆ ಎಂದು ಕೋರುವುದು ಸಹಜ. ಇತ್ತೀಚೆಗೆ ಕೆಲವು ತಾಲ್ಲೂಕು ಆಫೀಸುಗಳಲ್ಲಿ—ದೊಡ್ಡಬಳ್ಳಾಪುರ, ನೆಲಮಂಗಲ ಮುಂತಾದ ಸ್ಥಳಗಳಲ್ಲಿ ಅಮಲ್ದಾರರು ಹೆಚ್ಚು ಶ್ರದ್ಧೆ ವಹಿಸಿ ಈ ಪಟ್ಟಿಯನ್ನು ತಯಾರುಮಾಡಿ ಯಾರು ಬಂದರೂ ನೋಡುವ ಹಾಗೆ ಇಟ್ಟಿದ್ದಾರೆ. ಮತ್ತು ದರಖಾಸ್ತಿಗೆ ಅರ್ಜಿ ಹೋದತಕ್ಷಣ ದರಖಾಸ್ತು ರಿಜಿಸ್ಟರ್ ಎಂದು ಬೇರೆ ಇರುವುದರಲ್ಲಿ ದಾಖಲು ಮಾಡುತ್ತಾರೆ. ಅದರಲ್ಲಿ ಯಾರು ಬೇಕಾದರೂ ನೋಡಬಹುದು. ಒಂದು ಅರ್ಜಿ ಕೊಟ್ಟರೆ ಅದು ಯಾವ ಸ್ಥಿತಿಯಲ್ಲಿದೆಯೆಂಬುದು ಅದರಲ್ಲಿ ಕಂಡುಬರುತ್ತದೆ. ಪ್ರತಿ ತಿಂಗಳೂ ಸಹ ಅದು ಯಾವ ಸ್ಥಿತಿಯಲ್ಲಿದೆಯೆಂದು ಅಮಲ್ದಾರರು ನೋಡಿ ಚೆಕ್‌ಮಾಡಿ ರಾಜು ಮಾಡಬೇಕೆಂದು ಬೇರೆ ಗೊತ್ತು ಮಾಡಿದೆ. ಆರೀತಿ ನಿಬಂಧನೆಯಿದೆ. ಅಷ್ಟೇ ಅಲ್ಲದೆ ಮೂರು ತಿಂಗಳಿಗೊಂದು ಸಲ ಸರ್ಕಾರಕ್ಕೆ ವರದಿ ಕಳು ಹಿಸಬೇಕು. ಹೀಗಿರುವಾಗ ಇಷ್ಟು ಮಾನ್ಯ ಸದಸ್ಯರು ಊಹಿಸುವ ಹಾಗೆ ನಿಧಾನವಾಗುತ್ತಿಲ್ಲ ಎಂದು ಅನುಭವ ದಿಂದ ಹೇಳುತ್ತೇನೆ.

ಶ್ರೀ ಬಿ. ಹುಚ್ಚೇಗೌಡರು.—ತಮಗೆ ಮೂರು ತಿಂಗಳಿಗೊಂದು ಸಲ ವರದಿ ಬರುತ್ತಿದೆಯೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಬರುತ್ತಿದೆ. ಹತ್ತು ವರ್ಷದ ಲೆಕ್ಕ ನೋಡಿದರೆ ಮೂರು ವರ್ಷದಿಂದ ಇತ್ಯರ್ಥವಾಗುತ್ತಿರುವ ಅರ್ಜಿಗಳ ಸಂಖ್ಯೆ ಸೇಕಡಾವಾರು ಹೆಚ್ಚುತ್ತಿದೆಯೆಂದು ಹೇಳಿದೆ ವಿಧಿಯಿಲ್ಲ. ಅಧ್ಯಕ್ಷರು ಅವಕಾಶ ಕೊಟ್ಟು ಮಾನ್ಯ ಸದಸ್ಯರು ಇಷ್ಟಪಡುವುದಾದರೆ ಅದಕ್ಕೆ ಸಂಬಂಧಪಟ್ಟ ಪಟ್ಟಿಯನ್ನು ಓದಿ ಹೇಳಬಹುದು. ಸೇಕಡ 75ರಷ್ಟು ಪ್ರತಿ ತಾಲೂಕಿನಲ್ಲಿಯೂ ಈಗ ವಿಲೇವಾರಿಯಾಗುತ್ತಿದೆ. ಹೋದ ವರ್ಷ ಬಂದ ಅರ್ಜಿ ಮತ್ತು ಹಿಂದಿನ ಸಾಲಿನಿಂದ ಮುಂದುವರೆದಿರುವ ಅರ್ಜಿ ಎಲ್ಲಾ ಸೇರಿ 29,065 ಇತ್ತು. 1948-49 ರಲ್ಲಿ ವಿಲೇ ಆಗಿರುವುದು 21,989; ಇದರ ಪ್ರಕಾರ ಸೇಕಡ 75·6ರಷ್ಟು ವಿಲೇ ಆಗಿವೆ. ಈರೀತಿ ವಿಲೇವಾರಿ ಕಳೆದ ಹತ್ತು ವರ್ಷಗಳಲ್ಲಿ ಎಷ್ಟಾಗಿದೆಯೆಂಬುದನ್ನು ನಿನ್ನೆ ರಾತ್ರಿ ಹೇಳಿದೆ. ಯಾವ ವರ್ಷದಲ್ಲೂ ಕೂಡ ಇಷ್ಟು ಹೆಚ್ಚಿನ ಸಂಖ್ಯೆಯಲ್ಲಿ ವಿಲೆಯಾಗಿಲ್ಲ, ಜಮಾನುಗಳು ಸಹ ದೊರಕಿಲ್ಲ ಎಂಬುದು ನಿನ್ನೆ ಕೊಟ್ಟಿರುವ ಅಂಕಿ ಅಂಶಗಳಿಂದ ಗೊತ್ತಾಗಿದೆ. ಪುನಃ ಅದನ್ನು ಹೇಳಿ ಕಾಲಹರಣ ಮಾಡಲು ನನಗೆ ಇಷ್ಟವಿಲ್ಲ. ಕಳೆದ ವರ್ಷ 59 ಸಾವಿರ ಎಕರೆಗೆ ದರಖಾಸ್ತು ಬಂತು ; ನಿಮ್ಮವರ್ಗದವರಿಗೆ 12 ಸಾವಿರ ಎಕರೆ ಕೊಟ್ಟಿದೆ. ಕಳೆದ ಹತ್ತು ವರ್ಷಗಳಲ್ಲಿ ನೋಡಿದರೆ ಯಾವ ವರ್ಷದಲ್ಲೂ ಇಷ್ಟು ವಿಲೇ ಆಗಿಲ್ಲ. ಇನ್ನೂ ಹೆಚ್ಚಾಗಿ ಆಗಬೇಕೆಂದು ಹೇಳುವುದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಹೆಚ್ಚು ಮಾಡಲು ಪ್ರಬಲಪ್ರಯತ್ನ ಮಾಡಲಾಗುತ್ತೆ ಎಂದು ಭರವಸೆ ಕೊಡುತ್ತೇನೆ. ಇಷ್ಟು ಹೇಳಿದ ಮೇಲೆ ಮಾನ್ಯ ಸದಸ್ಯರು ತಮ್ಮ ಔದಾರ್ಯ ಸೂಚನೆಯನ್ನು ವಾಪಸು ತೆಗೆದುಕೊಳ್ಳುತ್ತಾರೆಂದು ನಂಬಿದ್ದೇನೆ.

ಶ್ರೀ ಬಿ. ಹುಚ್ಚೇಗೌಡರು.—ಆ ಸ್ಟೇಟ್‌ಮೆಂಟನ್ನು ಈ ಸಭೆಗೆ ಓದಿಸುತ್ತೀರಾ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಕಳುಹಿಸಿಕೊಡುತ್ತೇನೆ.

Sri B. HUTCHE GOWDA.—I seek the leave of the House to withdraw the cut motion.

The cut motion was, by leave of the Assembly, withdrawn.

Mr. SPEAKER.—The question is :

"That a sum not exceeding Rs. 25,21,000 be granted to the Government to defray the charges which will come in course of payment during the year ending 31st day of March 1952 in respect of 'Land Revenue'."

The motion was adopted.

Mr. SPEAKER.—Next demand.

DEMAND No. 2—STATE EXCISE

8. State Excise Duties.

*The Hon'ble Sri H. SIDDAIYA (Minister for Revenue and Excise).—Sir, on the recommendation of His Highness the Maharaja, I beg to move :

"That a sum not exceeding Rs. 16,90,000 be granted to the Government to defray the charges which will come in course of payment during the year ending 31st day of March 1952, in respect of 'State Excise'."

Mr. SPEAKER.—Motion moved :

"That a sum not exceeding Rs. 16,90,000 be granted to the Government to defray the charges which will come in course of payment during the year ending 31st day of March 1952, in respect of 'State Excise'."

Cut motion No. 32. Janab Syed Abdur Rahman.

Working of Prohibition Scheme in the State.

*Janab SYED ABDUR RAHMAN (Chikmagalur *cum* Shimoga–Muslim).—Sir, I beg to move :

"That the demand under the head '8. State Excise Duties (b) District Executive Establishment' for Rs. 3,86,300 be reduced by Rs. 100 (to raise a debate on the policy of the working of the Prohibition Scheme in the State."

Sir, while moving this cut motion I wish to state that the Government have undoubtedly for more than two years been very vigorously following the policy of prohibition in the Mysore State. I am glad that the Hon'ble Minister for Excise in his speech yesterday made reference to the policy that he would follow with regard to the extension of prohibition in the State. Two things emerge from his speech clearly : one is that as a consequence of having worked the scheme of prohibition there was considerable difficulty for the Administration to deal with it because there was so much of illicit distillation, that the Government detected several thousands of cases, and fines have been realised to a large extent. That is one aspect. The other aspect is with regard to the loss of revenue to the State consequent on having vigorously followed the policy of prohibition. Ever since the new Ministry came to the office, ever since prohibition was introduced, I have not got the least doubt that they did not show any slackness so far as the working of the scheme is concerned. They did as best as they could. As a result of that Government undoubtedly